CC-O. In Public Domain. Digitized by eGangotri

ಶ್ರೀ ಧ್ರುವ ಚರಿತ್ರೆ

ಸಂಗೀತ ರೂಪಕ

(ಸಂಸ್ಕೃತ ಶ್ಲೋಕಗಳು ತಾತ್ಪರ್ಯ ಸಹಿತ)

ರಚನೆ :

ಬಿ. ಗೋಪಾಲಕೃಷ್ಣ ಭಟ್
ಶ್ರೀ ಪಾಂಡುರಂಗ ದೇವಸ್ಥಾನ
ಪ್ಯಾಲೆಸ್ ಗುಟ್ಟಹಳ್ಳಿ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-3

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಧ್ರುವ ಚರಿತ್ರೆ

ಸಂಗೀತ ರೂಪಕ

(ಸಂಸ್ಕೃತ ಶ್ಲೋಕಗಳು ತಾತ್ಪರ್ಯ ಸಹಿತ)

ರಚನೆ :

ಬಿ. ಗೋಪಾಲಕೃಷ್ಣ ಭಟ್
ಶ್ರೀ ಪಾಂಡುರಂಗ ದೇವಸ್ಥಾನ
ಪ್ಯಾಲೆಸ್ ಗುಟ್ಟಹಳ್ಳಿ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–3

Sri Vidyabharathi Book Centre, Sringeri

CC-O. In Public Domain. Digitized by eGangotri

ಮೊದಲ ಮುದ್ರಣ : 1989

ಹಕ್ಕುಗಳನ್ನು ಕಾದಿರಿಸಲಾಗಿದೆ

ಬೆಲೆ : ರೂ. 5–00

ಮುದ್ರಕರು :
ಶ್ರೀ ಸುಧೀಂದ್ರ ಮುದ್ರಣಾಲಯ
ಬೆಂಗಳೂರು–3

Sri Vidyabharathi Book Centre, Sringeri

CC-O. In Public Domain. Digitized by eGangotri

अविच्छिन्नश्रीमदाद्यशंकराचार्यगुरुपरंपराप्राप्ताः
शृङ्गगिरिजगद्गुरुश्रीचन्द्रशेखरभारतीस्वामिपादाः

Sri Vidyabharathi Book Centre, Sringeri

CC-O. In Public Domain. Digitized by eGangotri



H.H. SRI ABHINAVA VIDHYATHEERTHA MAHASWAMIGAL
JAGADGURU MAHA SAMSTHANAM SARADHA PEETHAM
SRINGERI

Sri Vidyabharathi Foundation, Sringeri

CC-O. In Public Domain. Digitized by eGangotri



ಶ್ರೀಮತ್ ಪರಮಹಂಸ ಚಿತ್ಸಾಪುರ
ಶ್ರೀ ಆನಂದಾಶ್ರಮ ಸ್ವಾಮಿ ಗುರುಗ

CC-O. Vidyabharathi Book Centre, Sringeri

CC-O. In Public Domain. Digitized by eGangotri

ಬಿ. ಗೋಪಾಲಕೃಷ್ಣ ಭಟ್

CC-O. In Public Domain. Digitized by eGangotri

CC-O. In Public Domain. Digitized by eGangotri

ಶ್ರೀ ಹರಿಗುರು ಸ್ತವನ

ಶ್ರೀ ಗುರುಭ್ಯೋನಮ:

ವೇದೇಡ್ಯಾಂ ಪ್ರಣವಾತ್ಮಿಕಾಂ ಭಗವತೀಂ ಬುದ್ಧಿಪ್ರದಾಂ ಶೋಭನಾಂ ।
ನಾದಬ್ರಹ್ಮಮಯೀಂ ಸಮಸ್ತ ಜಗದಾಧಾರಾಂ ಪ್ರಸನ್ನಾನನಾಂ ।
ಶೃಂಗೇರೀಪುರವಾಸಿನೀಂ ಪರಶಿವಾಂ ಮಾಂಗಲ್ಯ ಸೌಖ್ಯಪ್ರದಾಂ ।
ವಂದೇ ಭಕ್ತಜನಪ್ರಿಯಾಮಭಯದಾಂ ತೇಜಸ್ವಿನೀಂ ಶಾರದಾಂ ।।

ವಂದಿಸುವೆನು ಶ್ರೀ ಪರಮಹಂಸ ಗುರು । ಚಂದ್ರಶೇಖರಭಾರತಿಯನು ನಾ ।।
।। ವಂದಿಸುವೆನು ।।

೧

ಧರೆಯೊಳು ಶ್ರೀ ಶೃಂಗೇರಿಪುರದಲಿ । ಶ್ರೀನರಸಿಂಹಭಾರತಿ ವರಗುರು ।।
ಚರಣಕಮಲದಲಿ ಅನುದಿನ ಸ್ತುತಿಸುವ । ಚಂದ್ರಶೇಖರಭಾರತಿಯನು ನಾ ।।
।। ವಂದಿಸುವೆನು ।।

೨

ವೇದಮಂತ್ರಗಳ ನಿಧಿಯಾಗಿರುವ ಶ್ರೀ । ವೇದಮಾತೆಯ ಶ್ರೀ ಶಾರದೆಯ ।।
ಪಾದಕಮಲವನು ಸದಾ ಸ್ಮರಿಸುವ । ಚಂದ್ರಶೇಖರಭಾರತಿಯನು ನಾ ।।
।। ವಂದಿಸುವೆನು ।।

೩

ಭರಿತವಾದ ನದಿ ತುಂಗಾತೀರದಿ । ವರಗುರು ಆದಿ ಶ್ರೀ ಶಂಕರನ ।।
ಗಂಗೋದಕ ಅಭಿಷೇಕವ ಮಾಡುವ । ಚಂದ್ರಶೇಖರಭಾರತಿಯನು ನಾ ।।
।। ವಂದಿಸುವೆನು ।।

೪

ನಿತ್ಯಪ್ರಕಾಶಕ ಸ್ವಯಂಜ್ಯೋತಿ ನೀ । ಪ್ರತ್ಯಗಾತ್ಮನು ನೀನಾಗಿಹೆ ಗುರು ।।
ಸತ್‌ಚಿತ್ ಆನಂದಾಮೃತರೂಪನೆ । ಚಂದ್ರಶೇಖರಭಾರತಿಯನು ನಾ ।।
।। ವಂದಿಸುವೆನು ।।

೫

ಶುದ್ಧ ಪೂರ್ಣಪರಬ್ರಹ್ಮಸ್ವರೂಪನೆ । ಉದ್ಧರಿಸಲಿ ಶ್ರೀ ಆದಿಶಂಕರನೆ ।।
ಅಭಿನವವಿದ್ಯಾತೀರ್ಥರೂಪದಲಿ । ವಂದಿಸುವೆನು ಶ್ರೀ ಪರಮಹಂಸ ಗುರು ।।

೬

ಮಂಗಲಮಯ ಪ್ರಣವಾತ್ಮಸ್ವರೂಪಿಣಿ । ಶೃಂಗೇರಿಪುರವಾಸಿನಿ ಶಾರದೆ ।।
ಸೌಮಂಗಲ್ಯದ ಸುಖವರದಾಯಿನಿ । ಮಂಗಲವಾಗಲಿ ಶೃಂಗಗಿರಿಯಲಿ ।।
। ವಂದಿಸುವೆನು ।।

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಗುರುಚರಣಕ್ಕೆ ಸಮರ್ಪಿತ

ನಾನು ನನ್ನ 18ನೇ ವಯಸ್ಸಿನಿಂದ ಬೆಂಗಳೂರಿನಲ್ಲಿ ವೈದಿಕವೃತ್ತಿಯನ್ನು ಮಾಡುತ್ತಾ ಇರುವಾಗ, 1934 ನೇ ಇಸ್ವಿಯಲ್ಲಿ ಶೃಂಗೇರಿ ಮಠದ ಶ್ರೀ ಪರಮಹಂಸ ಚಂದ್ರಶೇಖರ ಭಾರತಿ ಗುರುಗಳವರ ದರ್ಶನವಾಗಬೇಕೆಂಬ ಇಚ್ಛೆಯಿಂದ, ಬೆಂಗಳೂರಿನಿಂದ ಶ್ರೀ ಶೃಂಗೇರಿ ಮಠಕ್ಕೆ ಹೋದೆನು. ಅಲ್ಲಿ ಸ್ವಲ್ಪ ದಿವ್ಸ ನಿಂತು ಪ್ರಾತಃಕಾಲ ಸೂರ್ಯೋದಯಕ್ಕೆ ಸರಿಯಾಗಿ, ತುಂಗಾನದಿ ಸ್ನಾನಮಾಡಿ, ಜಪ, ವೇದಾಧ್ಯಯನ, ಪವಮಾನ ಪಾರಾಯಣೆ, ಶ್ರೀ ಸಪ್ತಶತಿ ಪಾರಾಯಣೆ, ಶ್ರೀ ಲಲಿತಾ ಸಹಸ್ರನಾಮ ಸೇವೆ ನಡೆಸಿ, ಶ್ರೀ ಶಾರದಾಂಬಾ ದೇವಿಯ ಚರಣಗಳಲ್ಲಿ ಪ್ರಾರ್ಥಿಸಿದೆನು. ಬ್ರಹ್ಮನಿಷ್ಠರೂ, ದಯಾಮಯರೂ, ಮಹಾತಪಸ್ವಿಗಳಾದ, ಶ್ರೀ ಚಂದ್ರಶೇಖರ ಭಾರತಿ ಗುರುಗಳವರ ಚರಣಗಳಲ್ಲಿ

।। ॐ आनंदोब्रह्मेति व्यजानात् ।।

ಈ ಉಪನಿಷದ್ ಅರ್ಥವನ್ನು ಉಪದೇಶಿಸಬೇಕೆಂದು ಪ್ರಾರ್ಥಿಸಿದೆನು. ಶ್ರೀ ಗುರುಗಳು, ಶ್ರೀ ನೃಸಿಂಹ ಭಾರತಿ, (ನೃಸಿಂಹವನ) ಸನ್ನಿಧಾನದಲ್ಲಿ ಆಶೀರ್ವಾದ ಪೂರ್ವಕ ಅರ್ಥವನ್ನು ದಯೆಪಾಲಿಸಿದರು.

ಶ್ರೀ ಚಂದ್ರಶೇಖರ ಭಾರತಿ ಗುರುಗಳ ಅನುಗ್ರಹದಿಂದಲೇ, ಶ್ರೀ ಭಾಗವತದಲ್ಲಿರುವ ಧ್ರುವ ಚರಿತ್ರೆ, ಸಂಸ್ಕೃತ ಶ್ಲೋಕಗಳು, ತಾತ್ಪರ್ಯ ಅರ್ಥ, ಸಂಗೀತರೂಪದಲ್ಲಿ ಪದಗಳು, ರಾಗ. ತಾಳಬದ್ಧವಾಗಿ, ಶ್ರೀ ಶಾರದಾಂಬೆಯ ಅನುಗಹ್ರದಿಂದಲೇ ರಚಿಸಿದ್ದೇನೆ. ಭಗವದ್ ಭಕ್ತರಲ್ಲಿ, ಧಾರ್ಮಿಕ ಆಧ್ಯಾತ್ಮಿಕ ಮತ್ತು ಮಾತಾ ಪಿತೃಗಳಲ್ಲಿ ವಿಧೇಯತ್ವ,

।। मातृदेवोभव, पितृदेवोभव, आचार्यदेवोभव ।।

ಅಭ್ಯುದಯವಾಗುವಂತೆ, ಧರ್ಮಶಾಸ್ತ್ರ ಆಧಾರದಂತೆ, ಜಗತ್ತಿನಲ್ಲಿ ಎಲ್ಲಾ ಜನರಲ್ಲಿಯೂ, ಚಿಕ್ಕವಯಸ್ಸಿನವರಲ್ಲಿ, ಧಾರ್ಮಿಕ, ಭಕ್ತಿಪ್ರೇಮ, ನಮ್ರತೆ, ವಿನಯ, ವಿದ್ಯೆಯಿಂದ, ಈ ಧ್ರುವ ಚರಿತ್ರೆಯನ್ನು ಅತಿ ಪ್ರೀತಿಯಿಂದ ಓದುವಾಗಲೇ, ಆ ಧ್ರುವನ ತಂದೆ, ತಾಯಿಯಲ್ಲಿ ಪ್ರೀತಿ, ಭಕ್ತಿ, ಶ್ರೀ ಭಗವಂತನಲ್ಲಿರುವ ಅತೀವ ಪ್ರೇಮ, ತಪಃಪ್ರಭಾವ, ಹೃದಯದಲ್ಲಿ ಭಕ್ತಿ, ಪ್ರೇಮ ಉದಯವಾಗಬಹುದೆಂದು ನಾನು ದೃಢವಾಗಿ ನಂಬುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ರುವನು ಬಾಲಕನಾಗಿರುವಾಗಲೇ, ರಾಜಸಿಂಹಾಸನದ ಇಚ್ಛೆಯಿಂದ, ತನ್ನ ತಂದೆಯ ಹತ್ತಿರ ಹೋದಾಗ, ತನ್ನ ಚಿಕ್ಕ ತಾಯಿಯು ಅಪಮಾನ ಮಾಡಿ, ಶ್ರೀ ಭಗವಂತನಲ್ಲಿ ಪ್ರಾರ್ಥಿಸಿ ತನ್ನ ಉದರದಲ್ಲಿ ಜನಿಸಿದರೆ ಮಾತ್ರವೇ, ಸಿಂಹಾಸನದ ಅಧಿಕಾರವಿದೆಯೆಂದು ಹೇಳಿದ ಮಾತ್ರದಿಂದಲೇ, ಧ್ರುವನು ಚಿಕ್ಕ ತಾಯಿಯ ಆಜ್ಞೆಯಂತೆ, ದಟ್ಟವಾದ ಅರಣ್ಯದಲ್ಲಿ ಶ್ರೀ ನಾರದಮುನಿಗಳ ಉಪದೇಶದಿಂದ, ಘೋರ ತಪಸ್ಸನ್ನು ಮಾಡಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಶ್ರೀ ಭಗವಂತನು ಧ್ರುವನ ದೃಢಭಕ್ತಿ, ಪ್ರೇಮಕ್ಕೆ ಒಲಿದು ವರವನ್ನು ದಯಪಾಲಿಸಿದನು. ಆ ಧ್ರುವನೇ ಈಗಲೂ ಆಕಾಶದಲ್ಲಿ ಗ್ರಹ ತಾರೆಗಳ ಸಮೂಹದಲ್ಲಿ, ಧ್ರುವನಕ್ಷತ್ರವಾಗಿ - ಸ್ವಯಂ ಪ್ರಕಾಶನಾಗಿ, ಇಡೀ ಜಗತ್ತಿನಲ್ಲಿಯೂ, ಸಮುದ್ರದಲ್ಲಿಯೂ ಪ್ರಕಾಶಿತನಾಗಿ ಇರುತ್ತಾನೆ.

ಈ ಧ್ರುವ ಚರಿತ್ರೆಯನ್ನು ಯಾವ ಮನುಷ್ಯನು ಅಭ್ಯಾಸಮಾಡಿ, ಶ್ರವಣ, ಮನನ, ಸಾಧನೆಯಿಂದ, ಸುಖ ಶಾಂತಿಯನ್ನು, ಶ್ರೀ ಭಗವಂತನ ಅನುಗ್ರಹವನ್ನು ಪಡೆಯಲೆಂದು ಪ್ರಾರ್ಥಿಸುತ್ತೇನೆ.

ಧ್ರುವ ನಕ್ಷತ್ರ ಪ್ರಕಾಶವು ಪ್ರತಿ ಮನುಷ್ಯರಲ್ಲಿ ಆತ್ಮಪ್ರಕಾಶದಂತೆ ಹೃದಯದಲ್ಲಿ ಉದಯವಾಗಲೆಂದು ಈಶ್ವರನಲ್ಲಿ ಪ್ರಾರ್ಥಿಸುತ್ತೇನೆ. ಈ ನನ್ನ 82ನೇ ವಯಸ್ಸಿನಲ್ಲಿ ಈ ಧ್ರುವ ಚರಿತ್ರೆಯನ್ನು ಮುಂದೆ ಭಾಷಿಸುವಂತೆ ಶ್ರೀ ಪರಮಹಂಸ ಅಭಿನವ ವಿದ್ಯಾತೀರ್ಥ ಗುರುಗಳವರ ಶ್ರೀ ಚರಣಗಳಲ್ಲಿ ಆಶೀರ್ವಾದ ಮಂತ್ರಾಕ್ಷತೆ ದಯೆಪಾಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಸಾಷ್ಟಾಂಗ ಪ್ರಣಾಮ ಮಾಡುತ್ತೇನೆ.

ಶ್ರೀ ಪರಮಹಂಸ, ಶ್ರೀ ಚಂದ್ರಶೇಖರ ಗುರುಗಳವರ ಚರಣಗಳಲ್ಲಿ ಅರ್ಪಿಸುತ್ತೇನೆ.

ತಮ್ಮ ವಿಧೇಯ ಆಜ್ಞಾಧಾರಕ,
(ಬಿ. ಗೋಪಾಲಕೃಷ್ಣ ಭಟ್)

Sri Vidyabharathi Book Centre, Sringeri

CC-O. In Public Domain. Digitized by eGangotri

ಮುನ್ನುಡಿ

ಶ್ರೀಮದ್ಭಾಗವತ, ಭಕ್ತಿ, ಜ್ಞಾನ, ವೈರಾಗ್ಯಗಳನ್ನು ಮಾನವರಲ್ಲಿ ಶ್ಲಾಘ್ಯವಾದ ರೀತಿಯಲ್ಲಿ ಬೆಳೆಸುವಂತಹ ಪುಣ್ಯ ಗ್ರಂಥ. ಭಾಗವತದಲ್ಲಿ, ವೇದ, ಉಪನಿಷತ್ತುಗಳ ಸಾರಸರ್ವಸ್ವವೂ ಅಡಗಿದೆ. ಭಗವತ್ ಪ್ರಾಪ್ತಿಗೆ ಯಾವುದು ಪರಮ ಸಾಧಕವೋ ಅದು ಇಲ್ಲಿ ಉಲ್ಲಿಖಿತವಾಗಿದೆ. ಇದರಲ್ಲಿಯ ಕಥನ ಕೌಶಲ, ಕಾವ್ಯರಸ, ವೈರಾಗ್ಯಮಾರ್ಗ ಅದ್ವಿತೀಯವಾದುದು. ಈ ಗ್ರಂಥ ಶುಕರಿಂದ ಪ್ರಣೀತವಾದದ್ದು.

"ಶ್ರೀಮದ್ಭಾಗವತಂ ಶಾಸ್ತ್ರಂ
ಕಲೌಕೀರೇಣ ಕೀರ್ತಿತಂ"

ಮನಃಶುದ್ಧಿಗೆ, ಭಗವತ್ಪ್ರಾಪ್ತಿಗೆ ಸಾಧನವಾದ, ಭಾಗವತದಲ್ಲಿ ಬರುವ ಧ್ರುವ ಚರಿತ್ರೆಯನ್ನು, ವೇ।। ಶ್ರೀ ಗೋಪಾಲಕೃಷ್ಣ ಭಟ್ಟರು ತಾತ್ಪರ್ಯಾರ್ಥದ ಮೂಲಕ, ಗೀತ ರೂಪದಲ್ಲಿ ತಂದಿದ್ದಾರೆ. ಮೂಲ ಗ್ರಂಥದ ಸವಿಯನ್ನು ಅನುಭವಿಸಿ, ಕನ್ನಡದಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಅವರು ನಮ್ಮೆಲ್ಲರ ಅಭಿನಂದನೆಗೆ ಪಾತ್ರರು.

ಈ ಕೃತಿಯನ್ನು ಪರಮ ಪೂಜ್ಯರೂ, ತಪಸ್ವಿಗಳೂ, ಜೀವನ್ಮುಕ್ತರೂ ಆದ ಶ್ರೀ ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತೀ ಸ್ವಾಮಿಗಳವರ ನೆನಪಿಗಾಗಿ ಅರ್ಪಿಸಿದ್ದಾರೆ. ಇದು ಗ್ರಂಥದ ಪಾವಿತ್ರ್ಯವನ್ನೂ ಬೆಲೆಯನ್ನೂ ಹೆಚ್ಚಿಸಿದೆ. ಈ ಕೃತಿಯ ಪಠನದಿಂದ ನೂರಾರು ಜನ ಆನಂದವನ್ನು ಪಡೆಯಲಿ ಎಂದು ಹಾರೈಸುತ್ತೇನೆ.

ಎಂ. ಪಿ. ಎಲ್. ಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಶಂಕ್ಕರಾಚಾರ್ಯ ಮಹಾಸಂಸ್ಥಾನಮ್
ದಕ್ಷಿಣಾಮ್ನಾಯ ಶ್ರೀಶಾರದಾಪೀಠಮ್ ಶೃಂಗೇರಿ

PRIVATE SECRETARY
To His Holiness
Sri Jagadguru Shankaracharya
Dakshinamnaya
Sri Sharada Peetham
SRINGERI-577 139 (Karnataka)
Phone 22

Camp : ಶೃಂಗೇರಿ
Ref. : Df/3881
Date : 11-7-89

ಸಂದೇಶ

ರಾಮಾಯಣ, ಮಹಾಭಾರತ ಮುಕ್ತಾಭಾಗವತ ಗ್ರಂಥಗಳು ಭಾರತೀಯರಿಗೆ ಅತ್ಯಂತ ಅಮೂಲ್ಯವಾದ ಧರ್ಮಗ್ರಂಥಗಳು, ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ, ನಮ್ಮ ಜೀವನವನ್ನು ಶ್ರೇಯಸ್ಸಿನತ್ತ ಒಯ್ಯುವ ಶ್ರೇಷ್ಠ ಗ್ರಂಥಗಳು.

ಅಮೂಲಾಗ್ರವಾಗಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದನೆಮಾಡುವ ಗ್ರಂಥ ಶ್ರೀಮದ್‌ಭಾಗವತ. ಶ್ರೀಕೃಷ್ಣನ ಸುಂದರವಾದ ಕಥೆಗಳ ಮೂಲಕ ಉಪನಿಷತ್ ಪ್ರತಿಪಾದ್ಯವಾದ ತತ್ವವನ್ನು ತಿಳಿಸುತ್ತದೆ. ಇಂತಹ ಉತ್ತಮವಾದ ಗ್ರಂಥದಲ್ಲಿ ಬರುವ ಧ್ರುವನ ಕಥೆಯನ್ನು ಸರಳವಾದ ಕನ್ನಡರೂಪದಲ್ಲಿ ಅನುವಾದ ಮಾಡಲಾಗಿದೆ. ಗೇಯಗುಣವನ್ನು ಹೊಂದಿರುವ ಈ ಪದ್ಯಗಳು ಅತ್ಯಂತ ಸುಲಭ ಶೈಲಿಯಲ್ಲಿದೆ. ಈ ಅನುವಾದ ರೂಪವಾದ ಗೀತರೂಪಕವನ್ನು ಆಪ್ತಕರು ಅಭ್ಯಸಿಸಿ, ಶ್ರೇಯಃಪ್ರಾಪ್ತಿಯನ್ನು ಹೊಂದಲೆಂದು ಶ್ರೀ ಗೋಪಾಲಕೃಷ್ಣ ಭಟ್ಟರಿಗೆ ಶ್ರೀ ಶಾರದಾಚಂದ್ರಮೌಳೀಶ್ವರರು ಅನುಗ್ರಹ ಮಾಡಲಿ ಎಂದು ಶ್ರೀಶ್ರೀಗಳವರು ಆಶೀರ್ವದಿಸಿರುತ್ತಾರೆ.

ಆಶೀರ್ಮಂತ್ರಾಕ್ಷತೆ, ಹಾಗೂ ಶ್ರೀ ಶಾರದಾಚಂದ್ರಮೌಳೀಶ್ವರರ ಪ್ರಸಾದಗಳನ್ನು ಕಳುಹಿಸುತ್ತಿದ್ದೇನೆ.

ಇಂತು,

ಟಿ. ಎ. ಗಿರಿಧರ ಶಾಸ್ತ್ರೀ

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ರೀಮತೇ ಮೂಲನಾರಾಯಣಾಯ ನಮಃ ॥

ಹರಿದಾಸ ಕುಲಭೂಷಣ, ಕೀರ್ತನಾಗ್ರೇಸರ,
ಸಂತ ಶ್ರೀ ಭದ್ರಗಿರಿ ಅಚ್ಯುತದಾಸಜೀ
1188, "ವಿಶ್ವಜ್ಯೋತಿ", 5ನೇ ಬ್ಲಾಕ್,
ರಾಜಾಜಿನಗರ, ಬೆಂಗಳೂರು-10
ದೂರವಾಣಿ: 351898

Haridasa Kulabhushana,
Keertanagresara,
Sant Sri Bhadragiri Achutadasji
1188, "Vishwajyothi", 5th Block,
Rajajinagar, Bangalore-560 010.
Phone: 351898

ಸಂದೇಶ

ವೈದಿಕ ಧರ್ಮದ ಪುರುಷಾರ್ಥರೂಪವಾದ, ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಪುರುಷಾರ್ಥ ಚತುಷ್ಟಯಗಳಲ್ಲಿ, ಮೋಕ್ಷವೇ ಗಮ್ಯವಾದರೂ, 'ಅರ್ಥಕಾಮ'ಗಳು ತ್ಯಾಜ್ಯವಲ್ಲಾ. ಧರ್ಮದಿಂದ ಅರ್ಥವನ್ನು ಗಳಿಸಿ, ಅದನ್ನು ಮೋಕ್ಷಕ್ಕೆ ವಿರುದ್ಧವಲ್ಲದ 'ಕಾಮ'ದಲ್ಲಿ ತೊಡಗಿಸುವುದೇ ಋಷಿಪ್ರಣೀತವಾದ ಉಜ್ಜೀವನ ಮಾರ್ಗ.

ಜೀವನವನ್ನು ಉಜ್ಜೀವನಗೊಳಿಸಲು, ಅರ್ಥ, ಕಾಮಗಳನ್ನು ಭಗವಂತನ ಪ್ರಸಾದವಾಗಿಸಿಕೊಳ್ಳಲು, ಜ್ಞಾನಯುಕ್ತವಾದ ಭಕ್ತಿಮಾರ್ಗವು ಸರ್ವಶ್ರೇಷ್ಠವು.

ನಶ್ವರವಾದ ಪ್ರಾಪಂಚಿಕ ವಿಷಯಗಳು, ಅಧ್ರುವ,
ಈಶ್ವರ ಸಂಬಂಧವಾದ ಸುಖವೇ ಧ್ರುವ.
ಇಂದ್ರಿಯ ಸುಖಗಳೇ ಸಂರುಚಿ.
ಆಧ್ಯಾತ್ಮಿಕ ಆನಂದ ಸುನೀತಿ.
ಜೀವಾತ್ಮನೇ ಉತ್ಥಾನಪಾದ.

ಇಂತಹ ತತ್ತ್ವಗಳಿಂದೊಡಗೂಡಿದ ಭಾಗವತದ ಕಥಾವಸ್ತು 'ಧ್ರುವ ಚರಿತ್ರೆ' ಯನ್ನು ಸಂದರ್ಭೋಚಿತವಾದ ಪದ ಪದ್ಯಗಳಿಂದ ಹಣೆದು ಕಥಾ-ಕೀರ್ತನ ಕಾರರಾಗಿ ಉತ್ತಮ ಸಾಹಿತ್ಯ ವಸ್ತುವನ್ನು ಒದಗಿಸಿದ್ದಾರೆ ವಿ॥ ಗೋಪಾಲಕೃಷ್ಣಭಟ್ಟರು. ಇವರ ನಿರ್ವ್ಯಾಜ ಭಾಷಾಜ್ಞಾನ, ನೈಷ್ಟಿಕೀ ವೃತ್ತಿ, ಬಾಲಸಹಜ ನಿರ್ವ್ಯಾಜ ಪ್ರೀತಿ ಎಲ್ಲವೂ ಇವರ ಜೀವನಾನುಭವದ ಪಕ್ವತೆಯ ಪ್ರತೀಕವೆನಿಸಿವೆ. ಎಂಬತ್ತೆರಡರ ಇಳಿವಯಸ್ಸಿನಲ್ಲಿ ಇಪ್ಪತ್ತೆಂಟರ ಸ್ಫೂರ್ತಿ ಇವರಲ್ಲಿ ಕಾಣಿಸುವುದು ಇವರ ಅಂತಃಶಕ್ತಿಯ ಪ್ರಭಾವವೆಂದೇ ತಿಳಿಯಬೇಕು.

ಈ ದಿವ್ಯ ಸಾಹಿತ್ಯವು ಬೇಗನೇ ಪ್ರಕಟವಾಗಿ ಪುಸ್ತಕರೂಪಗೊಂಡರೆ ಆಸ್ತಿಕ ಸಮಾಜಕ್ಕೆ ಬಹಳ ಉಪಕಾರವಾಗುವುದು. ಹಾಗೇ ನಮ್ಮ ಆರಾಧ್ಯ ದೇವರಾದ, ಶ್ರೀ ಪಾಂಡುರಂಗ ವಿಠಲ ಸ್ವಾಮಿಯು ಅಂತರ್ಯಾಮಿ ಶ್ರೀ ರಾಮಕೃಷ್ಣ ವೇದವ್ಯಾಸಾತ್ಮಕ ಹಯಗ್ರೀವ ಅಭೇದನಾದ ಶ್ರೀ ಮೂಲ ನಾರಾಯಣ ದೇವರು ಇದನ್ನು ಸಾರ್ಥಕಗೊಳಿಸಲೆಂದು ಆಶಿಸುತ್ತೇವೆ.

ಸಂತ ಭದ್ರಗಿರಿ ಅಚ್ಯುತದಾಸ್

Sri Vidyabharathi Book Centre, Shringeri

CC-O. In Public Domain. Digitized by eGangotri

॥ ಓಂ ಶ್ರೀಮಹಾಭಾಗವತ ॥

॥ ಸಂಸ್ಕೃತಶ್ಲೋಕಃ ॥

॥ ಧ್ರುವ ಚರಿತ್ರೆ ॥

ಶ್ರೀ ಚಂದ್ರಶೇಖರ ಭಾರತೀ ಗುರುಗಳವರ ಸ್ಮರಣಾರ್ಥ

ಈ ಗ್ರಂಥವನ್ನು ಅರ್ಪಿಸುತ್ತೇನೆ

ಶ್ಲೋಕಗಳು, ಕನ್ನಡದಲ್ಲಿ ತಾತ್ಪರ್ಯಾರ್ಥವು

ಸಂಗೀತರೂಪದಲ್ಲಿ ತಾತ್ಪರ್ಯಾರ್ಥವು

ಪದಗಳು ಅನೇಕ ರಾಗಗಳು ತಾಳಗಳಿಂದ ಕೂಡಿರುತ್ತದೆ.

ನನ್ನ ಪೂರ್ವ ಪೀಠಿಕೆ

ಶ್ರೀ ಚಂದ್ರಶೇಖರ ಭಾರತಿ ಗುರುಗಳವರ ಸ್ಮರಣಾರ್ಥ

॥ ಶ್ರೀ ಶಾರದಾಂಬಾ ಚರಣಗಳಲ್ಲಿ ಪ್ರಾರ್ಥನೆ ॥

॥ ಓಂ ॥

वेदे उपां प्रणवात्मिकां भगवतीं बुद्धिप्रदां शोभनां ।
नादब्रह्म मयीं समस्त जगदाधारां प्रसन्नाननां ।।
शृंगेरी पुरवासिनीं परशिणां मांगल्य सौख्य प्रदां ।।
वेदे भक्तजनप्रियामभयदां तेजस्विनीं शारदां ।।

ಪದ ॥ ರಾಗ : ಕಾಮವರ್ಧಿನೀ ತಾಳ : ರೂಪಾ

ದಯೆ ಪಾಲಿಸೈ ಶ್ರೀ ಶಾರದಾಂಬಾ ।
ದಯೆ ಪಾಲಿಸೈ ಶ್ರೀ ಶಾರದಾಂಬಾ ॥

ಇಂದ್ರಾದಿದೇವ ಸುರವಂದಿತೆ
ಚಂದ್ರಶೇಖರ ಗುರುಪೂಜಿತೆ ॥ ಅ ॥

॥ ೧ ॥
॥ ದಯೆ ಪಾಲಿಸೈ ಶ್ರೀ ॥

ಪಾಪಂಗಳೆಲ್ಲ ತೊರೆಸಿ ಎನ್ನಯ ।
ಗೋಪಾಲಕೃಷ್ಣ ವಿನುತ ಚರಣೆ ।।

॥ ದಯೆ ಪಾಲಿಸೈ ಶ್ರೀ ॥

ಶೃಂಗಾರವಾದ ಶೃಂಗೇರಿಯಲ್ಲಿ ।
ಮಾಂಗಲ್ಯನೀವ ಸಂಗೀತಲೋಲೆ ।।

॥ ೨ ॥
॥ ದಯೆ ಪಾಲಿಸೈ ಶ್ರೀ ॥
॥ ಶ್ರೀ ಶಾರದಾಂಬಾ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಲಲಿತ್ ಸೋಹನಿ ತಾಳ : ತ್ರಿತಾಳ

॥ ಶ್ರೀ ಚಂದ್ರಶೇಖರಭಾರತೀ ಸ್ವಾಮಿಗಳ ಪ್ರಾರ್ಥನೆ ॥

ವಂದಿಸುವೆನು ಶ್ರೀ ಪರಮ ಹಂಸಗುರು ।
ಚಂದ್ರಶೇಖರಭಾರತಿಯನು ನಾ ॥ ॥ ವಂದಿಸುವೆನು ಶ್ರೀ ॥

ಧರೆಯೊಳು ಶ್ರೀ ಶೃಂಗೇರಿಪುರದಲಿ ।
ಶ್ರೀ ನರಸಿಂಹಭಾರತಿ ವರ ಗುರು ॥

ಚರಣಕಮಲದಲಿ ಅನುದಿನ ಸ್ತುತಿಸುವ ॥ ೧ ॥
ಚಂದ್ರಶೇಖರಭಾರತಿಯನು ನಾ ॥ ॥ ವಂದಿಸುವೆನು ಶ್ರೀ ॥

ವೇದಮಂತ್ರಗಳ ನಿಧಿಯಾಗಿರುವ ಶ್ರೀ
ವೇದಮಾತೆಯ ಶ್ರೀ ಶಾರದೆಯ ॥
ಪಾದಕಮಲವನು ಸದಾ ಸ್ಮರಿಸುವ । ॥ ೨ ॥
ಚಂದ್ರಶೇಖರ ಭಾರತಿಯನು ನಾ ॥ ॥ ವಂದಿಸುವೆನು ಶ್ರೀ ॥

ಚರಿತವಾದನದಿ ತುಂಗಾತೀರದಿ ।
ವರಗುರು ಆದಿ ಶ್ರೀ ಶಂಕರನ ॥
ಗಂಗೋದಕ ಅಭಿಷೇಕವ ಮಾಡುವ । ॥ ೩ ॥
ಚಂದ್ರಶೇಖರ ಭಾರತಿಯನು ನಾ ॥ ॥ ವಂದಿಸುವೆನು ಶ್ರೀ ॥

ನಿತ್ಯಪ್ರಕಾಶಕ ಸ್ವಯಂ ಜ್ಯೋತಿ ನೀ ।
ಪ್ರತ್ಯಗಾತ್ಮನು ನೀನಾಗಿಹೆ ಗುರು ॥
ವಂದಿಸುವೆನೋ ಶ್ರೀ ಪರಮಹಂಸ ಗುರು । ॥ ೪ ॥
ಚಂದ್ರಶೇಖರ ಭಾರತಿಯನು ನಾ ॥ ॥ ವಂದಿಸುವೆನು ಶ್ರೀ ॥

ಮಂಗಲಮಯ ಪ್ರಣವಾತ್ಮ ಸ್ವರೂಪಿಣಿ ।
ಶೃಂಗೇರಿಪುರ ವಾಸಿನಿ ಶಾರದೆ ॥
ಸೌಮಂಗಲ್ಯದ ಸುಖವರದಾಯಿನಿ । ॥ ೫ ॥
ಮಂಗಲವಾಗಲಿ ಶೃಂಗಗಿರಿಯಲಿ ॥ ॥ ವಂದಿಸುವೆನು ಶ್ರೀ ॥

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಧ್ರುವಚರಿತ್ರೆ ಪ್ರಾರಂಭ ॥

॥ ಶ್ಲೋಕ ॥

सच्चिदानंदरूपाय विश्वोत्पत्यादिहेतवे ।
तापत्रयविनाशाय श्रीकृष्णायवयं नमः ।।

॥ ಪದ ॥ ರಾಗ : ಸೋಹನಿ ತಾಳ : ತ್ರಿತಾಳ

ಉದಯವಾಯಿತು ನಮ್ಮ ಸ್ವಯಂ ಜ್ಯೋತಿಯು ।
ಪದುಮನಾಭನ ಶ್ರೀ ಲಕ್ಷ್ಮೀಪತಿಯ ॥ ॥ ಅ ॥ ಉದಯವಾಯಿತು ॥

ಉದಯಿಸಿರುವ ಶ್ರೀ ಗಂಗಾಜಲವು ।
ಚರಣಾಂಗುಷ್ಠದ ಪದದೊಳಗೆ ನಿನ್ನ ।
ಕದಲದೆ, ಅನುದಿನ, ಮನಸು ನಿನ್ನಯ ದಿವ್ಯ ।
ಪದದೊಳಗಿರಿಸೋ ಶ್ರೀಕೃಷ್ಣಾ ನಿನ್ನ ॥ ॥ ಉದಯವಾಯಿತು ॥

ಅಂತರಂಗದಲಿ ಜಗದೊಳು ತುಂಬಿಹ ।
ಕಾಂತಿಪ್ರಕಾಶಕ ರವಿಯ ಕಿರಣಗಳು ।
ಶಾಂತಮೂರ್ತಿ ಶ್ರೀ ದಯಾನಂದ ಘನ ।
ಸಂತಸದಿಂದಲಿ ರಕ್ಷಿಸೋ ಶ್ರೀಹರಿ ॥ ॥ ಉದಯವಾಯಿತು ॥

ಆಧ್ಯಾತ್ಮಿಕ ಆದಿ ದೈವಿಕ ಭೌತಿಕ ।
ಬಾಧೆ ನಿವಾರಿಸಿ ಸೃಷ್ಟಿ ಸ್ಥಿತಿಗಳನು ।
ಬೋಧಕ ರೂಪದಿ ಬ್ರಹ್ಮಾನಂದದ ।
ವೇದಗಳೆಲ್ಲವು ಧ್ಯಾನಿಸುವೋ ಹರಿಯೇ ॥ ॥ ಉದಯವಾಯಿತು ॥

ನಿತ್ಯಪ್ರಕಾಶಕ ಸ್ವಯಂ ಜ್ಯೋತಿಯೇ ।
ಪ್ರತ್ಯಗಾತ್ಮನೀ ಹೃದಯಕಮಲದಲಿ ॥
ಸತ್ಯ ಚಿದಾನಂದ ಶ್ಯಾಮಸುಂದರನೇ ।
ಪ್ರತ್ಯಕ್ಷದಿ ಬಂದು ರಕ್ಷಿಸೊ ಹರಿಯೇ ॥ ॥ ಉದಯವಾಯಿತು ॥

ದೃಶ್ಯಾಕಾರದಿ ತೋರುವ ಜಗವೆಲ್ಲ ।
ವಿಶ್ವಾತ್ಮಕ ಪರಬ್ರಹ್ಮ ಸ್ವರೂಪನೇ ॥
ವಿಶ್ವೇಶ್ವರ ಜಗಧೀಶನೇ ನಮ್ಮನು ।
ರಕ್ಷಿಸೋ ಶ್ರೀಹರಿ ಜಗದೊಡೆಯನೆ ಕೃಷ್ಣಾ ॥ ॥ ಉದಯವಾಯಿತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

सच्चिदानंदरूपाय विश्वोत्पत्यादि हेतवे ।
तापत्रयविनाशाय श्रीकृष्णायवयंनमः ।।

॥ ತಾತ್ಪರ್ಯಾರ್ಥವು ॥

ಶ್ರೀ ಭಗವಂತನಾದ ಶ್ರೀಕೃಷ್ಣನು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆಲ್ಲಾ, ಮೂಲಕಾರಣನು, ಮತ್ತು ಸರ್ವಜೀವಿಗಳ, ಆಧ್ಯಾತ್ಮಿಕ, ಆದಿ ದೈವಿಕ ಮತ್ತು ಆದಿ ಭೌತಿಕ, ತಾಪತ್ರಯಗಳನ್ನು ನಿವಾರಣೆ ಮಾಡುತ್ತಾನೆ. ಅಂಥಾ ಸಚ್ಚಿದಾನಂದ ಸ್ವರೂಪನಾದ ಶ್ರೀಕೃಷ್ಣ ಪರಮಾತ್ಮನಿಗೆ ನಮಸ್ಕರಿಸುವೆವು.

॥ ಶ್ಲೋಕ ॥

जन्माद्यस्य यतोऽन्वया दितरतश्चार्थेष्वभिज्ञः स्वराट्
तेनेब्रह्महृदाय आदिकवये मुह्यंतियत्सूरयः ।
तेजो वारिमदां यथाविनिमयो यत्र त्रिसर्गो मृषा ।
धाम्नास्वेनसदा निरस्त कुहकं सत्यं परं धीमहि ।।

ಶ್ರೀಕೃಷ್ಣನು, ಉಪನಿಷದ್ ಪ್ರತಿಪಾದಕನಾದ ಪರಬ್ರಹ್ಮ ಸ್ವರೂಪನೇ ಆಗಿರುವನು. ಆ ಪರಬ್ರಹ್ಮನಿಂದಲೇ ಈ ಜಗತ್ತಿಗೆ, ಸೃಷ್ಟಿ, ಸ್ಥಿತಿ, ಲಯಗಳೆಂಬ ಮೂರು ಸ್ಥಿತಿಗಳಿರುವುವು. ಶ್ರೀಕೃಷ್ಣನ ಸ್ವರೂಪವು ಈ ಜಗತ್ತಿಗೇ, ಅತೀತವಾಗಿರುತ್ತದೆ. ಅವನು ಸ್ವಯಂ ಪ್ರಕಾಶಕನಾಗಿರುವನು. ಬ್ರಹ್ಮ ಮುಂತಾದ ಆದಿ ಕವಿಗಳು ಸಹಾ, ಈ ಪರಬ್ರಹ್ಮನ ವಿಚಾರದಲ್ಲಿ ಯಥಾರ್ಥವನ್ನು ತಿಳಿಯಲಾರರು. ಅಂಥಾ ಸ್ವರೂಪನಾದ ಪರಮಾತ್ಮನನ್ನು ಧ್ಯಾನಿಸುತ್ತೇನೆ.

॥ ಶ್ಲೋಕ ॥

जायेउत्तानपादस्य सुनीतिः सुरुचि रनयोः ।
सुरुचिः प्रेयसी पत्युनेतरातत्सुतो ध्रुवः ।।

॥ ತಾತ್ಪರ್ಯಾರ್ಥ ॥

ಜಗತ್ ಸೃಷ್ಟಿಕರ್ತನಾದ ಭಗವಂತನು ತನ್ನ ಲೀಲಾನಾಟಕವನ್ನು, ವಿನೋದಾರ್ಥವಾಗಿಯೇ ನಡೆಸುತ್ತಾ ಇದ್ದಾನೆ. ತನ್ನ ಹೃದಯ ಕಮಲದಿಂದ ಬಂದ, ಪ್ರಜಾಪತಿ ಬ್ರಹ್ಮನಿಂದ, ಸ್ವಾಯಂಭುವ ಮನುಕುಲದಲ್ಲಿ ಉತ್ತಾನಪಾದ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜನಲ್ಲಿ, ಸುನೀತಿಯ ಗರ್ಭದಲ್ಲಿ ಧ್ರುವನು, ಸುರುಚಿಯ ಗರ್ಭದಲ್ಲಿ ಉತ್ತಮನು ಜನಿಸಿದರು. ಧ್ರುವನು ತನ್ನ ಚಿಕ್ಕತಾಯಿಯ ಆಜ್ಞೆಯಂತೆ, ವನದಲ್ಲಿ, ನಾರದ ಮುನಿಗಳ ಉಪದೇಶದಿಂದ ಘೋರ ತಪಸ್ಸನ್ನು ಮಾಡಿದನು. ಧ್ರುವನ ತಪಃ ಪ್ರಭಾವದಿಂದ ದೇವತೆಗಳು ಶ್ರೀ ವಿಷ್ಣುವಿನ ಚರಣಗಳಲ್ಲಿ ಪ್ರಾರ್ಥನೆ ಮಾಡಿದರು. ಶ್ರೀ ಭಗವಂತನು ಮಧುವನದಲ್ಲಿ ತಪಸ್ಸು ಮಾಡುತ್ತಿರುವ ಧ್ರುವನ ತಪಸ್ಸಿಗೆ ಒಲಿದು, ಆಕಾಶದಲ್ಲಿ ಗ್ರಹನಕ್ಷತ್ರ ಮಂಡಲದಲ್ಲಿ ಧ್ರುವನಕ್ಷತ್ರವಾಗಿ ನಿರಂತರ ಪ್ರಕಾಶಮಾನವಾಗಿ, ಇಡೀ ಜಗತ್ತಿಗೆ ಪ್ರಕಾಶದಿಂದ ಹೊಳೆಯುತ್ತಿರುವಂತೆ ವರವನ್ನು ದಯಪಾಲಿಸಿದನು. ಈ ಧ್ರುವನಚರಿತ್ರೆಯನ್ನು ಹೇಳುವದು ಆಶ್ಚರ್ಯವಲ್ಲವೇ.

॥ ಪದ ॥ ರಾಗ : ಮಾಂಡ ತಾಳ : ಕ್ಷಿತಾಳ

अथातकीर्तयेवेशं पुण्यकीर्तेः कुरुद्वहा ।
स्वायं भुवस्यापिमनोर्हरे रंशांश जन्मनः ॥
प्रियव्रतोत्तानपादौ शतरूपापतेः सुतौ ।
वासुदेवस्यकलयार क्षायां जगतः स्थितौ ॥
जाये उत्तानपादस्य सुनीतिः सुरुचिस्त योः ।
सुरुचिप्रेयसीपत्युः नेतरातत्सुतो ध्रुवः ॥

॥ ಪದ ॥ ರಾಗ : ಮಾಂಡ ತಾಳ : ತ್ರಿತಾಳ

ಸ್ವಾಯಂಭುವಮನು ವಂಶೋದ್ಭವನಹಿ ।
ಪತಿ ಉತ್ತಾನಪಾದ ಭೂಪತಿಯು ॥
ಜ್ಯೇಷ್ಠರಾಣಿ ಸುನೀತಿಯ ಗರ್ಭದೊಳ್ ॥ ॥ ಸ್ವಾಯಂಭುವಮನು ॥
ಶ್ರೇಷ್ಠಪುತ್ರ ಧ್ರುವ ಜನಿಸಿದನು ॥ ॥ ೧ ॥
ಅತಿಪ್ರೀತಿಯ ಪತ್ನಿ ಸುರುಚಿಯ ಗರ್ಭದೊಳ್ ।
ಸುತ ಉತ್ತಮನು ಜನಿಸಿದನು ॥ ॥ ೨ ॥
ಸತತವಾಗಿ ಅತಿಪ್ರೇಮ ಸುರುಚಿಯೊಳ್ ॥ ॥ ಸ್ವಾಯಂಭುವಮನು ॥
ಸ್ಥಿತನಾದನು ಘನ ಭೂಪತಿಯು ॥

ಧ್ರುವನು ತಾಯಿ ಸುನೀತಿಯ ಆಜ್ಞೆಯನ್ನು ಪಡೆದೇ ತನ್ನ ತಂದೆಯ ದರ್ಶನಕ್ಕೆ ಹೋಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಪದ ॥ ರಾಗ : ಮಾಲಕಂಸ ॥ ತಾಳ : ಝಂಪಾ

ಭೀತಿಯೇತಕೆ ಎನಗೆ ಪಿತನ ನೋಡಲು ಅಮ್ಮಾ ।
ಖ್ಯಾತಿವಂತನು ಪಿತೋತ್ತಾನ ಪಾದರಾಜ ॥
ನೀತಿಯಿಂದಲಿ ಪೊರೆವ ರಾಜ ಶ್ರೇಷ್ಠನು ಅವನು ।
ಪ್ರೀತಿಯಿಂದಲಿ ಎನಗೆ ಕರೆವನಮ್ಮಾ ॥

ಓಹೊ ! ಈಗ ಉತ್ತಾನಪಾದ ರಾಜನ ದರ್ಬಾರ ನಡೆಯುತ್ತಾ ಇರಬಹುದು. ರಾಜನು ಸಿಂಹಾಸನಾರೂಢನಾಗಿ, ತನ್ನ ತೊಡೆಯ ಮೇಲೆ ಧ್ರುವ ಉತ್ತಮರನ್ನು ಕುಳ್ಳಿರಿಸಿಕೊಂಡು ಪ್ರೀತಿ ಸಂಭಾಷಣೆ ನಡೆಯುತ್ತಾ ಇರಬಹುದು. ಈ ಕ್ಷಣವೇ ನೋಡೋಣ.

ಉತ್ತಾನಪಾದ ರಾಜನ ದರ್ಬಾರು ನಡೆಯುತ್ತಾ ಇರುತ್ತದೆ.

॥ ಶ್ಲೋಕ ॥

एकदा सुरुचेः पुत्र मंकमारोप्य लालयन् ।
उत्तमंनारुरुक्षन्तं ध्रुवंराजाभ्यनन्दत ।।

तथाचिकीर्षं माणंतं सपत्न्या स्तनयं ध्रुवम् ।
सुरुचि शृण्वतोराज्ञाः सेर्षं महानिगर्विता ।।

तपसाऽराध्य पुरुषं तस्येवानुग्रहेणमे ।
गर्भेत्वं साधयात्मानं यदीच्छसिनृपासनम् ।।

ಉತ್ತಾನಪಾದ ರಾಜನು ಸಿಂಹಾಸನಾರೂಢನಾಗಿ ಧ್ರುವ ಉತ್ತಮರನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಅತೀ ಪ್ರೇಮದಿಂದ ಸಂಭಾಷಣೆ ಮಾಡುತ್ತಾ ಇರುವಾಗಲೇ, ರಾಣಿ ಸುರುಚಿಯು ನೋಡಿದಳು. ರಾಣಿ ಸುರುಚಿಯು ಕ್ರೋಧಾವೇಶದಿಂದಲೇ ಬಂದು ತಕ್ಷಣವೇ ಧ್ರುವನ ಕೈಗಳನ್ನು ಎಳೆದು, ಉತ್ತಾನಪಾದರಾಯನ ತೊಡೆಯ ಮೇಲಿಂದ ಕೆಳಕ್ಕೆ ಇಳಿಸಿ, ಧ್ರುವನಿಗೆ ಹೇಳುತ್ತಾಳೆ. ಏಲೈ ! ಬಾಲಕ ಧ್ರುವನೆ, ಈ ಸಿಂಹಾಸನದ ಅಧಿಕಾರ ಬೇಕಾದರೆ, ಅರಣ್ಯಕ್ಕೆ ಹೋಗಿ, ಶ್ರೀ ಭಗವಂತನ ಧ್ಯಾನ, ತಪಸ್ಸನ್ನು ಮಾಡಿ, ವರವನ್ನು ಪಡೆದು, ನನ್ನ ಉದರದಲ್ಲಿ ಜನಿಸಿದರೆ ಮಾತ್ರವೇ ಈ ಸಿಂಹಾಸನದ ಅಧಿಕಾರವಿದೆ. ಈ ಕ್ಷಣವೇ ಹೊರಡು ಎಂತ ಆಜ್ಞೆ ಮಾಡಿದಳು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಪದ ॥ ರಾಗ : ಕೇದಾರ ತಾಳ : ತ್ರಿತಾಳ

ಉದರದೊಳಿನ್ನಯ, ಜನಿಸಿ ಬಾರೋ ನೀ।
ಪದವಿಯ ಪಡೆಯುವೆ, ಸಿಂಹಾಸನದಲಿ ॥
ಪದುಮನಾಭನ, ಧ್ಯಾನ ತಪವಗೈದು ।
ಮುದದಿಂದಲಿ ಪಡೆ, ವರ ಲಕ್ಷ್ಮೀಶನ ॥

॥ ಶ್ಲೋಕ ॥

मातुः सपत्न्याः सदुरुक्तिविद्धः ।
श्वसन्रुषादंड्रुहतोयथाहिः ।।
हित्वा मिषन्तं पितरं सन्नवाचं ।
जगाममातुः प्ररुदन्सकाशम् ।।

ಧ್ರುವನು ಆಳುತ್ತಾ ತನ್ನ ತಾಯಿ ಸುನೀತಿಯ ಹತ್ತಿರಕ್ಕೆ ಹೋಗುತ್ತಾನೆ.

ರಾಗ : ಮಾಲಕಂಸ ತಾಳ : ಝಂಪಾ

ಎಲ್ಲಿರುವನಾತನು, ಸುಖಶಾಂತಿ ದಾತನು ।
ಫುಲ್ಲಲೋಚನ ಕೃಷ್ಣ, ತೋರಿಸಮ್ಮಾ ॥ ॥ ೧ ॥
ಎಲ್ಲರೊಳು ಜಗದೊಳಗೆ ತುಂಬಿಹನು ಪರಮಾತ್ಮ ।
ನಿಲ್ಲುವನು ಸ್ಥಿರವಾಗಿ ಹೃದಯಕಮಲದಲಿ ॥ ॥ ೨ ॥

ಧ್ರುವನಿಗೆ, ತಾಯಿ ಸುನೀತಿಯ ಉಪದೇಶ.

तमेववत्साश्रय भृत्यवत्सलं ।
मुमुक्षुभिर्मृग्य पदाब्जपद्धतिं ।।
अनन्यभावे निजधर्मभाविते ।
मनस्यवस्थाप्य भजस्वपूरुषं ।।

ಧ್ರುವ ಮಗನೆ ! ನೀನು ಭಕ್ತವತ್ಸಲನಾದ ಶ್ರೀಕೃಷ್ಣನ ಆಶ್ರಯ ಹೊಂದು. ಮುಮುಕ್ಷು ಜನರು, ಜನ್ಮಮೃತ್ಯುವೆಂಬ ಸಂಸಾರ ದುಃಖಿವನ್ನು ತಪ್ಪಿಸಿಕೊಳ್ಳಲು, ಶ್ರೀ ಭಗವಂತನ ಆಶ್ರಯವನ್ನೇ ಪಡೆಯುತ್ತಾರೆ. ನಿನ್ನ ಮನಸ್ಸು ಅತಿ ಪವಿತ್ರವಾಗಿರುವುದು. ನೀನು ನಿನ್ನ ಮನಸ್ಸಿನ ಎಲ್ಲಾ ಭಾವನೆಗಳನ್ನು ಮರೆತು ಬಿಟ್ಟು, ಶ್ರೀ ಭಗವಂತನ ಚಿಂತೆಯನ್ನು ಮಾಡುತ್ತಾ ಇರು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಪದ ॥ ರಾಗ : ತಾಳ : ಧಮಾಳಿ

ಪಾಲಿಸುವನು ನಿನ್ನ ಬಾಲಕನೇ ಧ್ರುವ ।
ನೀಲ ಮೇಘ ಘನ ಶ್ಯಾಮಸುಂದರನು ॥ ॥ ಅ ॥ ಪಾಲಿಸುವನು ॥
ಕಾಲಚಕ್ರ ತ್ರಿಕಾಲನ ಧರಿಸಿದ ।
ಗಾನಲೋಲ ಮಹಾ ಮಹಿಮ ಶ್ರೀಕೃಷ್ಣನು ॥ ಪಾಲಿಸುವನು ॥

ಧ್ರುವನು ರಾಜ್ಯವನ್ನು ಬಿಟ್ಟು ವನಕ್ಕೆ ಹೊರಡುವಾಗ, ಉತ್ತಾನ ಪಾದ ರಾಜನು, ಧ್ರುವ ಬಾಲಕನಿಗೆ ಹೇಳುತ್ತಾನೆ.

॥ ಪದ ॥ ರಾಗ : ಮಾಂಡ್ ರಾಗ : ತ್ರಿತಾಳ

ಬಿಡು, ಬಿಡು, ಹಟವನು, ಧ್ರುವ ಬಾಲಕನೆ ।
ಕೊಡುವೆನು ರಾಜ್ಯ ಸರ್ವಸ್ವವು ನಿನಗೆ ॥
ಅಡವಿಯೊಳಗೆ ಅತೀ ಭೀಕರ ಮೃಗಗಳು ।
ತಡೆಯಲಾರೆ ಭಯ ಕಷ್ಟಗಳನು ನೀ ॥

॥ ಪದ ॥ ರಾಗ : ಮಾಲಕಂಸ ತಾಳ : ರೂಪಂಪಾ

ಯಾಕೆ ಚಿಂತೆಯು ಪಿತನೆ, ಪರಮಾತ್ಮನಿರುತಿರೆ ॥ ॥ ೧ ॥
ಲೋಕದೊಡೆಯನು ಭಕ್ತ ರಕ್ಷಕನು ಜಗದೀಶ । ।। ಯಾಕೆ ಚಿಂತೆಯು ॥
ಏಕಾಂತದಲಿ ಎನ್ನ, ಹೃದಯದಲಿ ಧ್ಯಾನಿಸುತ ।
ಶ್ರೀಕರನ ಹರಿ ವರವ ಪಡೆದು ಬರುವನು ನಾನು ।। ॥ ೨ ॥

।। ಪದ ।। ರಾಗ : ದರ್ಬಾರಿ ಕಾನಡಾ ತಾಳ : ರೂಪಂಪಾ

ಮಾತೆ ಸುನೀತಿಯ ಮಾತು ಕೇಳಲು ತನ್ನ ।
ಖ್ಯಾತ ಉತ್ತಾನಪಾದ ಸುತನು ಧ್ರುವ ।।
ಭೀತಿ ಇಲ್ಲದವನಾತ್ಮ ಬಲದಿ ಶ್ರೀ ।
ನಾಥನ ದರುಶನ ವಾಗಲಿ ಎನಗೆ ॥

ಧ್ರುವನು ಆರಣ್ಯಕ್ಕೆ ಹೊರಡುತ್ತಾನೆ.

ರಾಗ : ದಕ್ಷಿಣಾದಿ ಶಂಕರಾ ತಾಳ : ರೂಪಂಪಾ

ಪಿತನ ರಾಜ್ಯವ ತೊರೆದು, ಅತಿ ಶೀಘ್ರದಲಿ ಬಂದು ।
ಪಥವ ತೋರಿಸು ಎನಗೆ, ಮುನಿವರ್ಯ ನಾರದನೆ ।।

Sri Vidyabharathi Book Centre, Sringeri

CC-O. In Public Domain. Digitized by eGangotri

ಸತತ ಲಕ್ಷ್ಮೀಪತಿಯ ಸ್ಮರಣೆಯೊಳು ಆನುದಿನದಿ । ।।೨।।
ರತನಾಗಿ ಇರುವ ಶ್ರೀ ಬ್ರಹ್ಮ ಪುತ್ರನೆ ನೀನು ।।

ಜನ್ಮಾಂತರ ಪುಣ್ಯ ಸಂಸ್ಕಾರ ಬಲದಿಂದಲೂ, ತಾಯಿ ಸುನೀತಿಯ ಆಶೀರ್ವಾದ ಬಲದಿಂದಲೂ, ಶ್ರೀ ಭಗವಂತನ ದರ್ಶನವಾಗಬೇಕೆಂಬ ಇಚ್ಛೆಯಿಂದಲೂ, ಘೋರ ಅರಣ್ಯದಲ್ಲಿ ಧ್ರುವನು ನಡೆಯುತ್ತಾ ಇರುವಾಗ,

ಅತಿ ಘೋರವಾದ ಅರಣ್ಯದಲ್ಲಿ ಧ್ರುವನಿಗೆ ಬ್ರಹ್ಮಪುತ್ರರಾದ ನಾರದ ಮುನಿಗಳ ದರ್ಶನ.

॥ ಪದ ॥ ರಾಗ : ಮಾಂಡ್ ಶ್ರೀತಾಳ

ಹರಿನಾರಾಯಣ ಸುರಾರಿಯೇಸುರ ।
ವರೇಣ್ಯ ಪಾಹಿಸದಾ ।
ಕರುಣಾಬ್ಧಿಯೇ ಮಹಾನುಭಾವಾ ।
ಶರಣಾಗತವರದಾ ॥ ೧ ॥ ॥ ಹರಿನಾರಾಯಣ । ಸುರಾರಿಯೇಸುರ ॥
ಮಹಾ ಪ್ರಭಾವಾ ಮಹೇಂದ್ರ ದೇವಾ ।
ಕ್ಷೀರಾರ್ಣವಶಯನಾ ॥
ಕರುಣಾಬ್ಧಿಯೇ ಮಹಾನುಭಾವಾ ।
ಶರಣಾಗತವರದಾ ॥ ೨ ॥ ॥ ಹರಿನಾರಾಯಣ । ಸುರಾರಿಯೇಸುರ ॥

ಬ್ರಹ್ಮಪುತ್ರರಾದ ನಾರದಮುನಿವರ್ಯರು, ವೀಣೆಯನ್ನು ಬಾರಿಸುತ್ತಾ, ಶ್ರೀ ಭಗವಂತನ ಸ್ಮರಣೆ ಮಾಡುತ್ತಾ ಬರುವಾಗ, ಧ್ರುವ ಬಾಲಕನು ನೋಡಿದನು. ತಕ್ಷಣವೇ ಧ್ರುವ ಬಾಲಕನು ಬ್ರಹ್ಮಪುತ್ರರಾದ ನಾರದ ಮುನಿಗಳ ಚರಣಗಳಲ್ಲಿ ಸಾಷ್ಟಾಂಗ ಪ್ರಣಾಮ ಮಾಡಿದನು. ನಾರದ ಮುನಿಗಳಿಗೆ ಧ್ರುವ ಬಾಲಕನನ್ನು ನೋಡಿ ಅತೀ ಆಶ್ಚರ್ಯವಾಯಿತು. ನಾರದರು, ಧ್ರುವ ಬಾಲಕನನ್ನು ನೋಡಿ, ಕೇಳುತ್ತಾರೆ : ಧ್ರುವ ಬಾಲಕನೇ, ಇಂಥಾ ಘೋರವಾದ ಅರಣ್ಯದಲ್ಲಿ, ತಂದೆ, ತಾಯಿಗಳನ್ನು ಬಿಟ್ಟು, ಭಯವಿಲ್ಲದೆ, ನಿಂತಿರುವೆಯಾ ?

ಧ್ರುವನು, ನಾರದ ಮುನಿಗಳ ಮಾತನ್ನು ಕೇಳಿ, ಅತಿ ವಿನಯದಿಂದಲೂ ಆನಂದ ಪ್ರೇಮದಿಂದಲೂ, ಕೈಜೋಡಿಸಿ ಪ್ರಾರ್ಥಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಶ್ಲೋಕ ॥

पदं त्रिभुवनोत्कृष्टं, जिगीर्षोः साधुवर्त्म मे ।
ब्रूहयस्मत्पितृभिर्ब्रह्मन्यैं रध्यनधिष्ठितम् ॥

ಧ್ರುವನು : ಬ್ರಹ್ಮ ಸ್ವರೂಪರಾದ ನಾರದರೇ, ನನ್ನ ಮಾತನ್ನು ಲಾಲಿಸಿರಿ.

ಮೂರು ಲೋಕಗಳಲ್ಲಿಯೂ ಯಾವದು ಶ್ರೇಷ್ಠ ಸ್ಥಾನವಿರುವದೋ ಆ ಸ್ಥಾನವನ್ನು ಪಡೆಯಬೇಕೆಂದು ಇಚ್ಛಿಸುತ್ತೇನೆ. ನಮ್ಮ ಪೂರ್ವಜರಲ್ಲಿ, ಯಾರೂ ಪ್ರವೇಶಿಸಲಾರರು, ಇಷ್ಟೇ ಅಲ್ಲದೆ, ಇತರರೂ ಯಾರೂ ಸಹಾ ಅಲ್ಲಿ ಪ್ರವೇಶಿಸಿರುವದಿಲ್ಲ, ಅಂಥಾ ಸ್ಥಳವು ನನಗೆ ದೊರಕಬಲ್ಲದೋ ? ಅದರ ಉಪಾಯವನ್ನು ನನಗೆ ತಿಳಿಸಿಕೊಡುವಿರಾ ? ಇದೇ ನನ್ನ ಪ್ರಾರ್ಥನೆ.

॥ ಶ್ಲೋಕ ॥

नूनं भवान् भगवतो योऽङ्गजपरमेष्ठिनः ।
वितुदन्तटतेवीणां हितार्थं जगतोऽर्कवत् ॥

ತಾವು ಚತುರ್ಮುಖ ಬ್ರಹ್ಮ ಪುತ್ರರಾಗಿರುವಿರಿ. ತಮ್ಮ ಮಹಿಮೆಯು ಸೂರ್ಯನಂತೆ ಜಗತ್ತಿಗೆಲ್ಲಾ ಪ್ರಕಾಶಿತವು. ವೀಣೆಯು ನಾದವು, ಆನಂದವುಯ ವಾಗಿರುವದು. ತಾವು ಸರ್ವ ಪ್ರಜೆಗಳಿಗೆ ಹಿತವನ್ನುಂಟುಮಾಡಬೇಕೆಂಬ ಇಚ್ಛೆ ಯಿಂದಲೇ ವೀಣೆಯನ್ನು ಬಾರಿಸುತ್ತಾ, ಶ್ರೀ ಭಗವಂತನ ಸ್ಮರಣೆಯಲ್ಲಿಯೇ ತನ್ಮಯರಾಗಿ ಮೂರು ಲೋಕಗಳಲ್ಲಿಯೂ ಸಂಚರಿಸುತ್ತಿರುವಿರಿ.

॥ ಪದ ॥ ರಾಗ : ಶಂಕರಾ ತಾಳ : ರೂಪಂಪಾ

ಬಿನ್ನವಿಸಿ ಕೇಳುವೆನು, ಬ್ರಹ್ಮಪುತ್ರನೆ ನಿನಗೆ ।
ಬಿನ್ನವಿಸಿ ಕೇಳುವೆನು ॥ ೧ ॥
ಅನ್ಯರಿಲ್ಲದ ಪದವು, ತ್ರಿಭುವನದೊಳಗೆ ॥
ವೀಣೆಯನು ಬಾರಿಸಲು, ಭಾಸುತೇಜದಿ ಹೊಳೆವ ।
ರವಿಯ ಕಿರಣಗಳಂತೆ, ಶ್ರೀ ಹರಿಯ ನಾಮ ॥ ೨ ॥
ಜ್ಞಾನ ಪೂರ್ಣ ಬ್ರಹ್ಮ ಜ್ಯೋತಿಯೇ ಹರಿನಾಮ ॥ ೩ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಧ್ಯಾನ ಮಾಡಲು, ಶ್ರೀ ಹರಿಯ ನಾಮಸ್ಮರಣೆ ।
ಬಿನ್ನವಿಸಿ ಕೇಳುವೆನು ॥ ೪ ॥
ಗಾನಲೋಲನೆ ನಮ್ಮ ಪ್ರಾಣ ರಕ್ಷಕನಾದ ಶ್ರೀ ಹರಿಯ ನಾಮ ॥

नारदस्तदुपाकर्ण्य ज्ञात्वातस्यचिषितम् ।
स्पृष्टवा मूर्धन्यवघ्नेन पाणिनाप्राङ्विस्मितः ॥

ನಾರದ ಮುನಿವರ್ಯರು ಧ್ರುವ ಬಾಲಕನ ಮನೋಭಾವವನ್ನು ತಿಳಿದು ಧ್ರುವ ಬಾಲಕನಿಗೆ ಶ್ರೀ ಭಗವಂತನ, ಶ್ರೀ ಶಂಖ ಚಕ್ರ ಗದಾ ಪದ್ಮ ಕಿರೀಟ ಕುಂಡಲ ಪೀತಾಂಬರ ಧಾರಿಯಾದ ಶ್ಯಾಮಸುಂದರನ ರೂಪ ಮಹಿಮೆಯನ್ನು ವರ್ಣಿಸುತ್ತಾರೆ.

॥ ಶ್ಲೋಕ ॥

श्रीवत्साङ्कं घनश्यामं पुरुषं वनमालिनं ।
शङ्ख चक्रगदापद्मै रभिव्यक्तचतुर्भुजम् ॥

ಆಯ್ಯಾ ಧ್ರುವನೇ ಆ ಹರಿಯ ವಕ್ಷ ಸ್ಥಳದಲ್ಲಿ ಶ್ರೀವತ್ಸ ಚಿನ್ಹೆ ಇರುವದು. ಅವನ ರೂಪವು ಶ್ಯಾಮ ವರ್ಣವಿರುವದು. ಆ ಪರಮ ಪುರುಷನ ಕಂಠದಲ್ಲಿ ವನಮಾಲಿ ಇರುವದು. ಅವನು ತನ್ನ ನಾಲ್ಕು ಕೈಗಳಲ್ಲಿ ಶಂಖ ಚಕ್ರ ಗದಾ ಪದ್ಮ ಇವುಗಳನ್ನು ಧರಿಸಿ ಕಂಗೊಳಿಸುತ್ತಿರುವನು.

॥ ಶ್ಲೋಕ ॥

किरीटिनंकुंडलिनं केयूर वलयान्वितम् ।
कौस्तुभा भरणग्रीवं पीतकौशेयंवासम् ॥

ಆ ಪರಮ ಪುರುಷನ ಅಂಗಗಳಲ್ಲಿ, ಕಿರೀಟ, ಕುಂಡಲ, ಕೇಯೂರ, ಕಂಕಣ, ಮುಂತಾದ ಆಭರಣಗಳು ಥಳಥಳಿಸುತ್ತಿರುವವು ಮತ್ತು ಅವನು ಕಂಠದಲ್ಲಿ ಕೌಸ್ತುಭ ಮಣಿಯನ್ನು ಧರಿಸಿ ಪೀತಾಂಬರಧಾರಿಯಾಗಿರುವನು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಪದ ॥ ರಾಗ : ಮಾಂಡ ತ್ರಿತಾಳ

ಮನದಲಿ ಧ್ಯಾನಿಸು ಬಾಲಕ ಧ್ರುವನೆ ಅನುದಿನ ಶ್ರೀಹರಿನಾಮಸ್ಮರಣೆಯನು ॥
ಶ್ರೀ ವತ್ಸಾನ್ವಿತ ಕೌಸ್ತುಭ ಮಣಿಧರ । ॥ ೨ ॥
ಶಂಖ ಚಕ್ರ ಶ್ರೀ ಗದಾಪದ್ಮಧರ ॥
ಮನದಲಿ ಧ್ಯಾನಿಸು ಬಾಲಕ ಧ್ರುವನೆ ॥ ॥ ೩ ॥
ಪಂಕಜಾಕ್ಷ ಶ್ರೀ ವನಮಾಲಾಧರ ।
॥ ಮನದಲಿ ಧ್ಯಾನಿಸು ಬಾಲಕ ಧ್ರುವನೇ ॥
ಪರಮ ಪುರುಷ ಶ್ರೀ ಪುರುಷೋತ್ತಮನ ॥
ಪ್ರಾತಃಕಾಲದ ರವಿಯ ಕಿರಣದೊಳು । ॥ ೪ ॥
ಜ್ಯೋತಿ ರೂಪದಿ ಹೊಳೆವ ಪ್ರಕಾಶಕ ॥
ಪೀತಾಂಬರಧರ ನಾಥ ಶ್ರೀಕೃಷ್ಣನ । ॥ ೫ ॥
॥ ಮನದಲಿ ಧ್ಯಾನಿಸು ಧ್ರುವನೇ
ಅನುದಿನ ಶ್ರೀ ಹರಿನಾಮಸ್ಮರಣೆಯನು॥
ಪ್ರೀತಿಯಿಂದಲಿ ಧ್ಯಾನಿಸು ಧ್ರುವನೇ ।।

जप्यश्चपरमोगुह्यः श्रूयतांमेनृपात्मज ।
यंसप्तरात्रं पठन् पुमान्पश्यतिखेचरान् ।।

ಅಯ್ಯಾ ರಾಜಕುಮಾರನೇ, ಭಗವಂತನ ಈ ವಂಶಗಳ ಸ್ವರೂಪವನ್ನು ಚಿತ್ತದಲ್ಲಿ ಧಾರಣೆ ಮಾಡಿಕೊಂಡು, ಅದರ ಜೊತೆಗೆ, ನಾನು ಈಗ ಹೇಳಿರುವ ಮಂತ್ರವನ್ನು ಜಪಿಸು. ಈ ಮಂತ್ರವು ಮಹಾ ರಹಸ್ಯವಾಗಿದೆ. ಈ ಮಂತ್ರವು ಎಂಥಾ ಮಹಿಮೆ ಎಂದರೆ, ಏಳು ದಿವಸಗಳವರೆಗೆ ಅಖಂಡವಾಗಿ, ಜಪಿಸಿದರೆ, ಮನುಷ್ಯನು ಆಕಾಶದಲ್ಲಿ ಹಾರಾಡುತ್ತಿರುವ ಸಿದ್ಧಿಪುರುಷರನ್ನು ದರ್ಶನ ಮಾಡಬಲ್ಲವನಾಗುತ್ತಾನೆ.

ಶ್ರೀ ನಾರದಮುನಿಗಳು ದೇವಬಾಲಕನಿಗೆ ಶ್ರೀ ಭಗವಂತನ ನಾಮ ಜಪವನ್ನು ಉಪದೇಶ ಮಾಡುವರು.

।। ಪದ ।। ರಾಗ : ಶಂಕರಾಭರಣ ತಾಳ : ಝಂಪಾ

ದೇಶದೊಳು ಜಗವೆಲ್ಲ ರಕ್ಷಕನು ಜಗದೀಶ ॥
ಓಂ ನಮೋ ಭಗವತೇ ವಾಸುದೇವನ ಮಂತ್ರ ॥ ॥ ೧ ॥

CC-O. In Public Domain. Digitized by eGangotri

ಶೇಷಶಯನನಾಗಿ ಕ್ಷೀರಸಾಗರದಲ್ಲಿ ॥ ದೇಶದೊಳು ಜಗವೆಲ್ಲ ॥
ವಾಸವಾಗಿರುವಂಥ ಹರಿಯ ಮಂತ್ರ ॥ ॥ ೨ ॥

ಭಾಸುರಾಂಗನೆ ಶ್ರೀನಿವಾಸನಾಮದ ಮಂತ್ರ ॥
॥ ದೇಶದೊಳು ಜಗವೆಲ್ಲ ರಕ್ಷಕನು ಜಗದೀಶ ॥

ವರದಹಸ್ತದಿ ಶಿರದೊಳ್ ಧ್ರುವಬಾಲಕನ ॥
ಓಂ ನಮೋ ಭಗವತೆ ವಾಸುದೇವಾಯ ।
ಓಂ ನಮೋ ಭಗವತೆ ವಾಸುದೇವಾಯ ।
॥ ॐ नमो भगवते वासुदेवाय ॥

॥ ಶ್ಲೋಕ ॥

पंचमेमास्यनुप्राप्ते जितश्वासोनृपात्मज ।
ध्यायन्ब्रह्मपदैकेनतस्थौस्थाणुविवाचल ॥

ನಾರದರಿಂದ ಉಪದೇಶಪಡೆದ ಧ್ರುವನು, ತತ್‌ಕ್ಷಣವೇ ಮಧುವನಕ್ಕೆ ಹೋಗಿ ಸ್ನಾನ ಮಾಡಿ, ಶುಚಿರ್ಭೂತನಾಗಿ ನಿಂತು, ಧ್ಯಾನವನ್ನು ಪ್ರಾರಂಭಿಸಿದನು. ಐದನೇ ತಿಂಗಳವರೆಗೆ ಎಡಬಿಡದೆ ಜಪಮಾಡುತ್ತಿದ್ದನು. ಧ್ರುವನು ಶ್ವಾಸವನ್ನು ತನ್ನ ಅಧೀನದಲ್ಲಿ ಇಟ್ಟುಕೊಂಡಿದ್ದನು. ತನ್ನ ಚಿತ್ತವನ್ನು ಪರಬ್ರಹ್ಮನಲ್ಲಿಯೇ ಲೀನಗೊಳಿಸಿ ತನ್ನ ಶರೀರದ ಭಾರವನ್ನು ಒಂದು ಕಾಲಿನ ಮೇಲೆ ನಿಲ್ಲಿಸಿ ಕಂಬದಂತೆ ಸ್ಥಿರವಾಗಿದ್ದನು.

॥ ಶ್ಲೋಕ ॥

सर्वतो मनआकृष्यहृयि भूतेन्द्रियाशयम् ।
ध्यायन् भगवतोरूपंनाद्राक्षीत्किंचनापरम् ॥
आधार महदादीनां प्रधानपुरुषेश्वरम् ।
ब्रह्मधारयमाणस्य त्रयोलोकश्चकंपिरे ॥

ಮಹದಾದಿತತ್ವಗಳಿಗೆ, ಆಧಾರಭೂತನು ಪ್ರಕೃತಿ ಪುರುಷಗಳಿಗೆ ನಿಯಾಮಕನಾಗಿರುವನು, ಆ ಭಗವಂತನು ಅಧೀಶ್ವರನು. ಇಂಥಾ ಮಹಿಮೆಯುಳ್ಳ ಪರಬ್ರಹ್ಮನಲ್ಲಿ ಧ್ರುವನ ಮನಸ್ಸು ಸ್ಥಿರವಾಗಿತ್ತು. ಪರಬ್ರಹ್ಮನಲ್ಲಿಯೇ ತನ್ಮಯನಾಗಿ ದೇಹಭಾವವನ್ನೇ ಮರೆತನು.

ಧ್ರುವನು ತನ್ನ ಪ್ರಾಣಶಕ್ತಿಯನ್ನು ಪರಬ್ರಹ್ಮನಲ್ಲಿಯೇ ಲಯಗೊಳಿಸಿದನು.

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಬ್ರಹ್ಮ ಶಕ್ತಿಯ ಮಹಿಮೆ ॥

अथायमशरीरोऽमृत । अथायमशरीरोऽमृतः ।।
प्राणोब्रह्मैवतेजएव । प्राणोब्रह्मैवतेजएव ।।
अमृतःप्राणःब्रह्मएव । अमृतःप्राणःब्रह्मएव ।।

॥ ಬ್ರಹಸೂತ್ರದ ತಾತ್ಪರ್ಯಾರ್ಥ ॥

ಇವನು ಶರೀರರಹಿತನು, ಅಮೃತಸ್ವರೂಪನು, ಪ್ರಾಣನು ಬ್ರಹ್ಮನಾಗಿದ್ದಾನೆ, ತೇಜಸ್ವರೂಪನೂ ಆಗಿದ್ದಾನೆ, ಅಮೃತಸ್ವರೂಪನಾದ ಪ್ರಾಣನು ಬ್ರಹ್ಮನೇ ಆಗಿರುತ್ತಾನೆ.

॥ ಬ್ರಹ್ಮಸೂತ್ರದ ತಾತ್ಪರ್ಯಾರ್ಥ ॥

ಸರ್ವರಲ್ಲಿಯೂ ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ಈ ಪಂಚ ಪ್ರಾಣಗಳಿಂದ ನಿತ್ಯಚಲಿಸುವಂತೆಯೂ, ಶಕ್ತಿದಾತನು ಪ್ರಾಣನೇ ಆಗಿರುತ್ತಾನೆ. ಈ ಪ್ರಾಣನು, ತೇಜರೂಪದಲ್ಲಿರುವನು, ಸ್ವಯಂ ಪ್ರಕಾಶನು, ಆನಂದ ಮಯನೂ ಆಗಿದ್ದಾನೆ.

ಧ್ರುವನು ವ್ಯಕ್ತಿರೂಪದಲ್ಲಿ ಬಹಿರ್ಮುಖಿವಾಗಿ ಚಲಿಸುವ ಮನಸ್ಸನ್ನೂ, ಸರ್ವರಲ್ಲಿಯೂ ಇರುವ ಪ್ರಾಣ ಶಕ್ತಿಯನ್ನೂ ತನ್ನ ಆತ್ಮಬಲದಿಂದ ಆಕರ್ಷಣೆ ಮಾಡಿ, ದೇಹಭಾವವನ್ನು ಮರೆತು ಬ್ರಹ್ಮಸ್ವರೂಪದಲ್ಲೇ ತನ್ಮಯನಾದನು.

॥ ಶ್ಲೋಕ ॥

तास्मिन्नभिध्यायतिविश्वमात्मनो ।
द्वारंनिरुध्यासुमनन्ययाधिया ।। ।। ೧ ।।

लोकानिरुच्छ्वासनपीडिताभृशं ।
सलोकपालाः शरणयर्यूहरिं ।। ।। ೨ ।।

चराचरस्या खिलसत्वधाम्नः ।
नैवंविदामो भगवन् प्राणरोधं ।। ।। ೩ ।।

विधेहितन्नो वृजिनोद्विमोक्ष ।
प्राप्तावयंत्वां शरणं शरण्यं ।। ।। ೪ ।।

Sri Vidyabharathi Book Centre, Sringeri

CC-O. In Public Domain. Digitized by eGangotri

।। ಪದ ।। ರಾಗ : ಮಾಲಕಂಸ ತಾಳ : ರಘಂಪಾ

ಆಧಾರ ಮಹದಾದಿ । ಪ್ರಧಾನಪುರುಷೇಶ್ವರ ।
ಬ್ರಹ್ಮಧರಿಸಿದ ಧ್ರುವನು, ತಪದಬಲದಿ ॥ ॥ ೧ ॥
ಮೂರು ಲೋಕದೊಳಿಲ್ಲ ಬೀರಿದವು ತಪಜ್ವಾಲೆ ।
ಕ್ಷೀರಸಾಗರಶಯನ, ಪರಬ್ರಹ್ಮ ಮಹಿಮೆಯು ॥ ॥ ೨ ॥

।। ಪದ ।। ರಾಗ : ಮಾಂಡ ತಾಳ : ರಘಂಪಾ

ಸುರರು ಶೀಘ್ರದಿ ಬಂದು, ಶ್ರೀಹರಿಯ ಚರಣದಲಿ ।
ಕರಗಳನು ಜೋಡಿಸಿ, ಸ್ಮರಿಸಿದರು ಶ್ರೀ ಹರಿಯ ॥
॥ ಸುರರು ಶೀಘ್ರದಿ ॥ ೧ ॥

ದೀನನಾಥನೆ ದೇವ, ಪ್ರಾಣರಕ್ಷಿಸೋ ನಮ್ಮ ।
ಭಾನುತೇಜೋಚರಿತ ಜಗದೀಶ ಶ್ರೀಹರಿಯೆ ॥ ೨ ॥

ದೇವತೆಗಳು ಕ್ಷೀರಸಾಗರದಲ್ಲಿ ಶ್ರೀ ಮಹಾವಿಷ್ಣು ಚರಣಗಳಲ್ಲಿ ಪ್ರಾರ್ಥಿಸುತ್ತಾರೆ.

ಹೇ ಭಗವಂತನೇ, ಸ್ಥಾವರ ಜಂಗಮ ಜೀವರಾಶಿಗಳಲ್ಲಿರುವ ಪ್ರಾಣ ಶಕ್ತಿಯು ಚಲಿಸದೇ ನಿಂತುಹೋಗಿದೆ. ಇಂಥಾ ಅನುಭವ ನಮಗೆ ಎಂದೂ ಆಗಿರಲಿಲ್ಲ, ಈ ಸಂಕಷ್ಟದಿಂದ ನಮ್ಮನ್ನು ರಕ್ಷಿಸುವಂತೆ, ನಿನ್ನ ಚರಣಗಳಲ್ಲಿ ಪ್ರಾರ್ಥಿಸುತ್ತೇವೆ.

॥ ಪದ ॥ ರಾಗ : ಕೇದಾರ ತಾಳ : ಧೂಮಾಳಿ

ಭಯವೇಕೆ ನಿಮಗೆ ಸುರರೆ ? ದಯೆಪಾಲಿಸುವೆನು
ನಾನಿರುತಿರಲು । ಭಯವೇಕೆ ನಿಮಗೆ ಸುರರೇ ?
॥ ಭಯವೇಕೆ ನಿಮಗೆ ಸುರರೇ ॥ ೧ ॥

ಪ್ರಿಯಬಾಲಕ ಧ್ರುವ, ತಪವನಿಲಿಸಿ ನಾ
ನಿಯಮಕನಾಗಿ, ತಾರಾಂಗಣದೊಳು । ॥ ೨ ॥
ಸ್ವಯಂಪ್ರಕಾಶದಿ ಹೊಳೆವಂತೆ ಧ್ರುವನಿಗೆ ।। ೩ ।।
ಸ್ಥಿರಪದವನಿತ್ತು ತಪವನಿಲಿಸುವೆನು ॥
॥ ಭಯವೇಕೆ ನಿಮಗೆ ಸುರರೇ ॥ ೪ ॥

ದೃಷ್ಯಾಕಾರದಿ ತೋರುವ ಜಗವೆಲ್ಲ ।
ವಿಶ್ವಾತ್ಮಕ ಬ್ರಹ್ಮತುಂಬಿಹನು ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶ್ವೇಶ್ವರಜಗದೀಶನಹೃದಯದೊಳ್ ।
ವಿಶ್ವಾಸದಲಿ ಧ್ಯಾನಿಸಿದನು ಧ್ರುವ ।।

।। ಭಯವೇಕೆ ನಿಮಗೆ ಸುರರೇ ॥ ೫ ॥

॥ ಶ್ಲೋಕ ॥

माभैष्टबालंतपसोदुरत्यया ।
निवर्तयिष्ये प्रतिस्वधाम ।। ।। ೧ ।।
यतोहिवः प्राणनिरोधआसी ।
दौन्नपदिमंयिसंगतात्मा ।। ।। ೨ ।।
तएवमुत्सन्नभयाउरुक्रमे ।
कृतावनामाः प्रययुरिन्नविष्टपम् ।। ।। ೩ ।।
सहस्रशीर्षा पिततोगरुत्मता ।
मधोर्वनं भृत्य दिदक्षयागत ।। ।। ೪ ।।

ಶ್ರೀ ಭಗವಂತನಿಂದ ಆಶ್ವಾಸನೆ ಪಡೆದು ದೇವತೆಗಳ ಭಯವು ದೂರ ವಾಯಿತು. ದೇವತೆಗಳು ಶ್ರೀ ಭಗವಂತನಿಗೆ ನಮಸ್ಕರಿಸಿ, ಸ್ವರ್ಗಕ್ಕೆ ತಮ್ಮ ಸ್ವಸ್ಥಾನಕ್ಕೆ ಹೋದರು.

ವಿರಾಟ್‌ಸ್ವರೂಪನಾದ ಶ್ರೀ ಭಗವಂತನು, ಸಗುಣರೂಪದಿಂದ ತತ್ ಕ್ಷಣವೇ ಗರುಡಾರೂಢನಾಗಿ, ಮಧುವನಕ್ಕೆ, ಭಕ್ತನಾದ ಧ್ರುವನನ್ನು ನೋಡಲು ಬಂದನು. ಶ್ರೀ ಭಗವಂತನು ಬಂದ ಸಮಯದಲ್ಲಿಯೂ ಸಹಾ, ಧ್ರುವನು ಏಕಾಗ್ರಚಿತ್ತದಿಂದ ಧ್ಯಾನಮಾಡುತ್ತಾ ಶ್ರೀ ಭಗವಂತನಲ್ಲಿ ತನ್ಮಯ ನಾಗಿಯೇ ಇದ್ದನು.

॥ ಶ್ಲೋಕ ॥

सवैधिया योगविपाकतीव्रया ।
हृत्पद्मकोशेस्फुरितंतडित्प्रभम् ।।
तिरोहितं सहसैवोपलक्ष्य ।
बहिः स्थितं तदवस्थ ददर्श ।।

ಆ ಧ್ರುವನಾದರೊ ತೀವ್ರವಾದ ಯೋಗನಿಷ್ಠೆಯಿಂದ ಕೂಡಿದ ಮನಸ್ಸಿನಿಂದ ಹೃದಯ ಕಮಲದಲ್ಲಿಯೇ ಪ್ರಕಾಶಿಸುತ್ತಿರುವ ಭಗವಂತನು, ಕೂಡಲೇ ಮರೆಯಾದವನಾಗಿ, ಸಗುಣರೂಪದಿಂದ, ಕೋಟಿಸೂರ್ಯ ಪ್ರಕಾಶ ನಾದ ಭಗವಂತನು ತನ್ನ ಮುಂದೆಯೇ ಪ್ರತ್ಯಕ್ಷನಾಗಿ ನಿಂತಿರುವದನ್ನು ಕಂಡನು.

Sri Vidyabharathi Bo[illegible] Centre, Sringeri

CC-O. In Public Domain. Digitized by eGangotri

॥ ಧ್ರುವನಿಗೆ ಶ್ರೀ ಭಗವಂತನ ಸಗುಣರೂಪದರ್ಶನ ॥

तद्दर्शने ना गत साध्वस:क्षिता ।
ववन्दताङ्गं विनमय्यदण्डवत् ।। ।। ೧ ।।

दृग्भ्यांप्रपश्यन प्रपिबन्निवाभंक ।
श्चुम्बन्निवास्येन भुजैरिवाश्लिषन् ।। ।। ೨ ।।

ಧ್ರುವನು, ಶ್ರೀ ಭಗವಂತನ ದರ್ಶನದಿಂದ ಯಾವ ಭಯವೂ ಇಲ್ಲ ದವನಾಗಿ, ಭೂಮಿಯಲ್ಲಿ ಸಾಷ್ಟಾಂಗವಾಗಿ ದಂಡವತ್ ಪ್ರಣಾಮಮಾಡಿದನು. ಬಾಲಕನಾದ ಧ್ರುವನು, ಶ್ರೀ ಭಗವಂತನನ್ನು ಕಣ್ಣುಗಳಿಂದ ಆನಂದದಿಂದ ನೋಡುವಂತವನಾಗಿಯೂ, ಮುಖದಿಂದ ಚುಂಬನ ಮಾಡತಕ್ಕವನಂತೆಯೂ, ಕೈಗಳಿಂದ ಆಲಿಂಗನ ಮಾಡಿಕೊಳ್ಳುವನಂತೆಯೂ, ಏನೋ ಹೇಳುವ ಬಯಕೆ ಉಳ್ಳವನಂತೆಯೂ, ಶ್ರೀ ಭಗವಂತನ ಸೌಂದರ್ಯರೂಪವನ್ನು ವೀಕ್ಷಿಸುತ್ತಾ, ದೀರ್ಘವಾಗಿ ನೋಡುತ್ತಲೇ, ಶ್ರೀ ಭಗವಂತನ ಸಗುಣರೂಪ ದಲ್ಲಿ ತಲ್ಲೀನವಾಗಿ ತನ್ಮಯನಾದನು.

सतंविवक्षतं मतद्विदहरिर्ज्ञात्वा स्यसर्वस्यचहृद्यवस्थित. ।
कृताञ्जलिब्रह्ममयेनकम्बुना पस्पर्शबालं कृपयाकपोले ।।

॥ ತಾತ್ಪರ್ಯಾರ್ಥ ॥

ಸರ್ವ ಪ್ರಾಣಿಗಳ ಹೃದಯ ಗುಹಾವಾಸಿಯಾದ ಪರಮಾತ್ಮನು, ಈ ಧ್ರುವ ಬಾಲಕನು ಏನೋ ಹೇಳಲು ಬಯಸುತ್ತಿದ್ದಾನೆ ಎಂದು ತಿಳಿದು, ಅಂಜಲೀಬದ್ಧ ಬಾಲಕನನ್ನು ಕೃಪೆಯಿಂದ ಬ್ರಹ್ಮಮಯವಾದ ವೇದಮಯ ತನ್ನ ಶಂಖದಿಂದ ಧ್ರುವನ ಕಪೋಲದಲ್ಲಿ ಕೆನ್ನೆಯನ್ನು ಸ್ಪರ್ಶಿಸಿದನು.

।।ಪದ।। ರಾಗ : ಹಮೀರ ತಾಳ : ತ್ರಿತಾಳ

ಹರಿಯ ದರುಶನವಾಯಿತು, ಧ್ರುವನಿಗೆ ॥ ಹರಿಯ ದರುಶನವಾಯಿತು ।।
ಪರಮ ದಯಾಘನ ಹರಿಯ ಚರಣದಲಿ । ॥ ೧ ॥
ಶಿರವನರಿಸಿ, ಸಾಷ್ಟಾಂಗ ಪ್ರಣಾಮದಿ ।
ಕರಗಳ ಜೋಡಿಸಿ, ವಂದಿಸಿದನು ಧ್ರುವ ॥ ।।ಹರಿಯ ದರ್ಶನ।।
ಭುಜಗಳ ಹಿಡಿದು, ಆಲಿಂಗಿಸಿ ಧ್ರುವನನು ।

Sri Vidyabharathi Book Centre, Sringeri

CC-O. In Public Domain. Digitized by eGangotri

ಗಜರಾಜನ ವರದಾಯಕನೇ ಹರಿ ॥ ॥ಅ.ಪ॥ ಹರಿಯುದರ್ಶನ
ಭಜನೆಯೊಳಗೆ ಎನ್ನ ಭವಕೆ ಒಲಿದೆ ನೀ ।
ನಿಜಸ್ವರೂಪ ಸದಾನಂದ ಹರಿಯೇ॥ ಹರಿಯು ಶರ್ದನ

॥ಪದ॥ ರಾಗ : ಭೂಪ ತಾಳ : ತ್ರಿತಾಳ

ವೇದಬ್ರಹ್ಮಮಯ ಶಂಖಿಸ್ಪರ್ಶಿಸಲು ।
ನಾದಬ್ರಹ್ಮಮಯ ವಾಣಿ ಸರಸ್ವತಿ ॥

ಬೋಧಿಸಿ ಜ್ಞಾನವ ಧ್ರುವಬಾಲಕನೊಳು
ಆದಿಶಕ್ತಿ ಪರಬ್ರಹ್ಮ ಸ್ವರೂಪಿಣಿ ॥
ಉದಯವಾಯಿತು ಧ್ರುವಬಾಲಕನೊಳು ।
ಸ್ವಯಂ ಪ್ರಕಾಶದ ಜ್ಞಾನಜ್ಯೋತಿಯು ॥

॥ಪದ॥ ರಾಗ : ಶಂಕರಾ ತಾಳ : ರೂಪಂಪಾ

ಜೀವನೊಳು ಅನುದಿನದಿ ।
ಹೊಳೆವ ಜ್ಯೋತಿಯೆ ಬ್ರಹ್ಮ ॥ ॥ ೧ ॥
ಭಾವಭಕ್ತಿಯೇ ಪ್ರೇಮ ।
ಸ್ತುತಿಸಿ ಶ್ರೀ ಹರಿನಾಮ । ॥ ೨ ॥
ಧನ್ಯನಾದನು ಧ್ರುವನು ।
ಜಗದೊಳಗೆ ಪೂರ್ಣ ॥ ॥ ೩ ॥

ಶ್ಲೋಕ

योऽन्तप्रविश्य ममवाचमिमांप्रसुप्तां ।
संजीवयत्यखिलशक्तिधरः स्वधाम्ना ।। ॥ ೧ ॥
अन्यांश्च हस्तचरण श्रवणत्वगादीन् ।
प्राणान्न मो भगवते पुरुषायतुभ्यम् ।। ॥ ೨ ॥

॥ಅರ್ಥ॥

ಧ್ರುವನು ಶ್ರೀ ಭಗವಂತನ ಮಹಿಮೆಯನ್ನು ವರ್ಣಿಸುತ್ತಾನೆ, ಪ್ರಾರ್ಥಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೇ ಭಗವಂತನೆ !

ಎಲ್ಲಾ ಪ್ರಾಣಿಗಳ ಜೀವಶಕ್ತಿಯನ್ನೂ, ಪಂಚಕರ್ಮೇಂದಿಯಗಳ ಶಕ್ತಿಯನ್ನೂ, ಪಂಚಪ್ರಾಣ, ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ ಶಕ್ತಿಯನ್ನು ತನ್ನಲ್ಲಿಯೇ ಧರಿಸಿದ ಪುರುಷನೇ – ನಾನು ನಿನ್ನ ಸಗುಣ ಮೂರ್ತಿಯನ್ನು ಧ್ಯಾನಮಾಡುತ್ತಾ, ನನ್ನ ಹೃದಯ ಕಮಲದಲ್ಲಿ ನನ್ನ ವಾಕ್ ಮನಸ್ಸು, ದೇಹ ಭಾವವೆಲ್ಲವನ್ನೂ ಮರೆತು ನಿನ್ನಲ್ಲಿಯೇ ತನ್ಮಯನಾಗಿ, ಆನಂದಮಯನಾಗಿರುವಾಗ, ಕ್ಷಣದೊಳು ಅದೃಶ್ಯನಾಗಿ ಸಗುಣರೂಪದಿಂದ,, ನನ್ನ ಎದುರಿನಲ್ಲಿ ಪ್ರತ್ಯಕ್ಷನಾಗಿ ನಿಂತಿರುವನು ಯಾರಯ್ಯಾ ನೀನು ? ಶ್ರೀ ಭಗವಂತನೇ ನಿನಗೆ ಸಾಷ್ಟಾಂಗ ನಮಸ್ಕರಿಸುತ್ತೇನೆ.

॥ಪದ॥ ರಾಗ : ಮಾಂಡ ತಾಳ : ತ್ರಿತಾಳ

ಯಾರೊ ? ನೀ ಹೃದಯದೊಳು ಶ್ರೀ ಹರಿಯೆ ?
ಯಾರೋ ನೀ ಹೃದಯದೊಳು ॥
ಪ್ರೇರಕನಾದ ಜೀವಾತ್ಮ ಪ್ರಕಾಶಕ ।
ವಾರಿಧಿ ಶಯನ ಶ್ರೀ ಲಕ್ಷ್ಮೀರಮಣನೇ ॥ಯಾರೊ ನೀ ॥ ೧ ॥
ಮನಸು ವಾಚಗಳೆಲ್ಲ ಚಿನುಮಯಾನಂದನ ।
ಪ್ರಣವಾತ್ಮಕ ಪರಬ್ರಹ್ಮನೊಳಿರುತಿರೆ ॥ ॥ ೨ ॥
ಅನುದಿನ ಚಲಿಸುವ ಪಂಚಪ್ರಾಣಗಳ
ತನುವಾಗಿರುವ ನೀ ಜಗದೊಡೆಯನೆ ಕೃಷ್ಣಾ ॥ ಹರಿಯೇ ॥ ೩ ॥
ಇನಶಶಿಕಾಂತಿ ಪ್ರಕಾಶಕ । ಯಾರೊ ನೀ ಹೃದಯದೊಳು ॥
ಹರಿಯೆ ರೂಪನೇ ॥ ೪ ॥
ಕ್ಷಣದೊಳು ಎದುರಲಿ ನಿಂತವನ್ಯಾರೊ ?
॥ ಯಾರೋ ನೀ ಹೃದಯದೊಳು ಹರಿಯೇ ॥

॥ ಧ್ರುವನಿಗೆ ಶ್ರೀ ಭಗವಂತನು ವರಪ್ರಸಾದ ಮಹಿಮೆ ಪಾಲಿಸುವನು.

॥ ಶ್ಲೋಕ ॥

नान्यैराधितभद्र यद्ध्रुवजिष्णु ध्रुवक्षिति ।
यत्रग्रहक्षताराणां ज्योतिषां चक्रमार्हितम् ॥

॥ ಧ್ರುವನು ಶ್ರೀ ಭಗವಂತನ ಸ್ತುತಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

॥ ಪದ ॥ ರಾಗ : ಭೈರವಿ ತಾಳ : ತ್ರಿತಾಳ

ಕರುಣಿಸೊ ಶ್ರೀಹರಿ ಪುರುಷೋತ್ತಮನೆ ।
ಪರಮಪಾವನ ನಿನ್ನ ಸ್ಮರಣೆಯೊಳಿರಿಸೊ ॥ ॥ಕರುಣಿಸೋ ಶ್ರೀ ಹರಿ॥

ಶೀತಲಶಾಂತ ಪ್ರಶಾಂತ ಈ ವನದೊಳು ॥ ೧ ॥
ಕಾಂತಿಯಿಂದಲಿ ಹೊಳೆವ ಪ್ರಕಾಶದಿ ॥ ೨ ॥
ಅಂತರಂಗದಲಿ ಜಗದೊಳು ತುಂಬಿಹ ॥ ಕರುಣಿಸೊ ॥

ಶಾಂತಮೂರ್ತಿ ಶ್ರೀ ಜಗದೊಡೆಯನೆ ಕೃಷ್ಣಾ ॥ ॥ ೩ ॥
ಮಾತೆ ಸುನೀತಿಯ ಗರ್ಭದಿ ಜನಿಸಿದ ॥ ೪ ॥
ಖ್ಯಾತ ಉತ್ತಾನ ಪಾದಸುತನಿಗೆ । ॥ಕರುಣಿಸೊ॥

ಪ್ರೀತಿಯಿಂದ ವರದಾತನಾದ ಶ್ರೀ ॥ ೫ ॥
ನಾಥಪರಮ ಜಗನ್ನಾಥ ವಿಠ್ಠಲನೇ ॥ ೬ ॥
ಶಂಖಚಕ್ರಗಳ ಧರಿಸಿಬಂದೆಯೋ ನೀ
ಓಂಕಾರಧ್ವನಿ ನಾದಬ್ರಹ್ಮನ । ॥ ಕರುಣಿಸೊ ॥
ಸಂಖ್ಯೆಯಿಲ್ಲದ ವೇದ ಮಂತ್ರಗಳು ॥ ೭ ॥
ರೆಘೋಂಕಾರದಿ ನಿನ್ನ ಧ್ಯಾನಿಸುವರೊ ಹರಿಯೆ ॥

॥ ಧ್ರುವನ ಸ್ತುತಿ ॥

ಶ್ರೀ ಭಗವಂತನೇ ನಿನ್ನ ಪಾದಕಮಲ ಧ್ಯಾನದಿಂದಲೂ, ನಿನ್ನ ಲೀಲಾ ಕಥಾಶ್ರವಣದಿಂದಲೂ, ದೇಹಿಗಳಿಗೆ ಯಾವ ವಿಧವಾದ ಆನಂದ ಬರುವದೋ, ಆ ಆನಂದವು ವಿಧೇಯ ಕೈವಲ್ಯದಲ್ಲಿಯೂ ಕೂಡಾ ದೊರಕಲಾರದು. ನಿನ್ನ ಸ್ಮರಣೆ, ಧ್ಯಾನದಿಂದ, ಆನಂದವು ಸಂಸಾರ ಸಮುದ್ರವನ್ನು ದಾಟುವಂತೆಯೂ, ನಿನ್ನ ಪಾದಾರವಿಂದದಲ್ಲಿ ನಿಶ್ಚಲವಾದ ಭಕ್ತಿ ಪ್ರೇಮ ಇರುವಂತೆಯೂ, ಅನು ಗ್ರಹಿಸು ಎಂದು ಧ್ರುವನು ಸ್ತುತಿಸಿದನು.

ರಾಗ : ಪೀಲು ॥ ಪದ ॥ ತಾಳ : ತ್ರಿತಾಳ

ಹೊಳೆಯುತಿದೆ ಎನ್ನ ಹೃದಯ ಕಮಲದಲಿ
ಥಳಥಳಿಸುವ ರವಿಪ್ರಕಾಶದಂದದಿ ॥ ಹೊಳೆಯುತಿದೆ ॥
ಒಳ ಹೊರತುಂಬಿಹ ಪೂರ್ಣಬ್ರಹ್ಮನ
ನಳಿನಾಕ್ಷ ಶ್ರೀಕೃಷ್ಣಮೂರ್ತಿಯು ॥ ಹೊಳೆಯುತಿದೆ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಇಳೆಯೊಳು ಭಕ್ತರ ರಕ್ಷಕ ನೀಹರಿ
ಜಲಧಿಶಯನ ಶ್ರೀ ಲಕ್ಷ್ಮೀಪತಿಯೆ ॥
ಚಲಿಸುವ ಮನಸೆನ್ನ ಶರಧಿಯಲೆಗಳಂತೆ ।
ನಿಲಿಸು ನಿನ್ನಯ ದಿವ್ಯಶಾಂತಿ ಸಾಗರದಲಿ ॥ ಹೊಳೆಯುತಿದೆ ॥

।। ಶ್ರೀ ಭಗವಂತನು ಧ್ರುವನಿಗೆ ಹೇಳುತ್ತಾನೆ ।।

॥ ವರ ಪ್ರಸಾದ ॥

ಧ್ರುವನೇ ನಿನ್ನ ಮನೋಭಾವವನ್ನು ಅರಿತೆನು, ನಿನ್ನ ಇಚ್ಛೆಯಂತೆ ಅದು ದುರ್ಲಭವಾಗಿದ್ದರೂ, ನಾನು ನಿನಗೆ ಕೊಡುವೆನು, ಯಾವಸ್ಥಾನವು ಈ ವರೆಗೂ, ಯಾರಿಂದಲೂ ಅಧಿಷ್ಠಿತವಾಗಿರಲಿಲ್ಲವೊ ? ಯಾವದು ಸ್ಥಿರವಾಗಿಯೂ ಅಖಂಡವಾಗಿಯೂ ಪ್ರಕಾಶಮಯವಾಗಿಯೂ ಇರುವುದೊ, ಯಾವ ಸ್ಥಾನದಲ್ಲಿ ಗ್ರಹ ನಕ್ಷತ್ರ ಮಂಡಲಾದಿಗಳೆಲ್ಲವೂ ಪ್ರತಿಷ್ಠಿತವಾಗಿರುವವೊ, ಅಂಥ ಸ್ಥಾನವನ್ನು ಅನುಗ್ರಹಿಸುತ್ತೇನೆ ಧ್ರುವನಕ್ಷತ್ರವಾಗಿ ಭೂಮಂಡಲದಲ್ಲಿ ಸ್ವಯಂ ಪ್ರಕಾಶಮಾನವಾಗಿರುವಂತೆ ವರಪಾಲಿಸುತ್ತೇನೆ. ನೀನು 36 ಸಹಸ್ರ ವರ್ಷ ರಾಜ್ಯವನ್ನಾಳಿ, ಮಹತ್ತರವಾದ ಯಜ್ಞಯಾಗಾದಿಗಳಿಂದ ನನ್ನನ್ನು ಆರಾಧಿಸಿ, ಸಕಲ ಭೋಗಗಳನ್ನು ಅನುಭವಿಸಿದವನಾಗಿ, ಶಾಶ್ವತವಾದ ನನ್ನ ಸ್ಥಾನವನ್ನು ಪಡೆಯುತ್ತೀಯೇ ಎಂದು ಅನುಗ್ರಹಿಸಿ, ಸ್ವಸ್ಥಾನಕ್ಕೆ ಶ್ರೀ ಭಗವಂತನು ಮರೆಯಾದನು.

ಧ್ರುವನು, ಅನೇಕ ವರ್ಷಗಳ ರಾಜ್ಯಭಾರಮಾಡಿ, ತನ್ನ ತಮ್ಮನಾದ ಉತ್ತಮನಿಗೆ ರಾಜ್ಯವನ್ನು ವಹಿಸಿ ಕೊಟ್ಟು, ಆಕಾಶದಲ್ಲಿ ಈಗಲೂ ಧ್ರುವನಕ್ಷತ್ರವಾಗಿ ಸ್ವಯಂ ಪ್ರಕಾಶಮಾನನಾಗಿ ಇಡೀ ಭೂಮಂಡಲದಲ್ಲಿ ಪ್ರಕಾಶಿಸುತ್ತಾನೆ.

ದಯಾಮಯನಾದ ಶ್ರೀ ಭಗವಂತನು, ಸರ್ವರ ಹೃದಯ ಕಮಲದಲ್ಲಿ ಆತ್ಮಪ್ರಕಾಶನಾಗಿ, ದಯೆ, ಶಾಂತಿ, ಕ್ಷಮೆಯಿಂದಲೂ, ಪೂರ್ಣ ಆನಂದಮಯವಾಗುವಂತೆ ಶ್ರೀ ಭಗವಂತನ ಚರಣದಲ್ಲಿ ಪ್ರಾರ್ಥಿಸುತ್ತೇನೆ.

ಬಿ. ಗೋಪಾಲಕೃಷ್ಣ ಭಟ್

Sri Vidyabharathi Book Centre, Sringeri

CC-O. In Public Domain. Digitized by eGangotri

॥ತ್ರಿತಾಳ॥ ॥ದಯಮಾಡೋ, ರಂಗಾ ರಾಗದಲ್ಲಿ॥

ದಯ ಮಾಡೊ ಕೃಷ್ಣಾ ದಯೆಮಾಡೊ ।
ನಯನದೊಳಗೆಎನ್ನ ಕೃಷ್ಣಮೂರ್ತಿಯೇ ॥
ಮೆರೆಯುತಿರಲಿ ಜಗದಂತರಂಗದಲಿ ॥೧॥
॥ದಯಮಾಡೋ ಕೃಷ್ಣಾ, ದಯಮಾಡೊ॥

ಮಾಯಾ ಆಟದ ಚಿತ್ರದೊಳಗೆನಿನ್ನ ।
ಛಾಯಾರೂಪದಿ ಹೊಳೆವಚಿತ್ರಗಳು ॥
ಮಾಯೆಯೇನಿನ್ನ ಆದಿಶಕ್ತಿಯು ॥೨॥
ಸ್ವಯಂಪ್ರಕಾಶಕ ಜಗದೀಶನೆಕೃಷ್ಣಾ ॥ ॥ದಯಮಾಡೋ ಕೃಷ್ಣಾ॥

ಮಲ್ಲಿಗೆ ಹೂವಿನ ಹಾರವಧರಿಸಿದ ।
ಮಲ್ಲಾಪುರ ಗುರು ದತ್ತದಯಾಘನ ॥
ಶ್ರೀಪಾದ ಶ್ರೀವಲ್ಲಭ ಸ್ಮರಣೆಯ ॥೩॥
ನಿಲ್ಲಿಸೋ ಕೃಷ್ಣಾ ಹೃದಯ ಕಮಲದಲಿ ॥ ದಯಮಾಡೋ ಕೃಷ್ಣಾ।

ಘನವರ ರವಿ ಶಶಿಕಾಂತಿ ಪ್ರಕಾಶಕ ।
ಪ್ರಣವ ಸ್ವರೂಪ ಶ್ರೀ ಗುರುಯತಿವರ ॥
ಶರಣಾಗತ ರಕ್ಷಕ ನಾಗಿರುವಂಥ ॥೪॥
ಗುರುದತ್ತಾತ್ರೆಯ ವರವ ಪಾಲಿಸೊ ॥ ॥ದಯಮಾಡೋ ಕೃಷ್ಣಾ॥

ಚಿಂತೆಯೆಂಬ ಈ ಮನದ ವಿಕಾರವು ।
ಭ್ರಾಂತಿಗೊಳಿಸುತ ಚಲಿಸುವ ಜಗದೊಳು ॥
ಶಾಂತಮೂರ್ತಿ ಗುರು ಆನಂದಾಶ್ರಮ ॥
ಗುರುಚರಣದೊಳೆನ್ನ ಮನ ನಿಲಿಸೊ ॥

ರಾಗ : ಮಾಲಕೌಂಸ್ ॥ ಪದ ॥ ತಾಳ : ರಖಂಪೆ

ಸೃಷ್ಟಿಗೊಡೆಯನು ನೀನೆ । ಇಷ್ಟದಾಯಕ ನೀನೆ
ಸೃಷ್ಟಿಸಿದ ಜಗಕೆಲ್ಲ । ಪಾಲಕನು ನೀನೆ ॥ ಪ. ॥
ಅಷ್ಟಮಠ ಯತಿಗಳಿಂ । ನಿತ್ಯ ಪೂಜಿಸುವಂಥ
ಭಕ್ತವತ್ಸಲ ನೀನೇ । ಉಡುಪಿ ಕೃಷ್ಣಾ ॥ ಅ.ಪ. ॥

ಜ್ಯೇಷ್ಠಮಾಸದ ಬಹುಳ । ಅಷ್ಟಮಿಯ ದಿನದಲಿ
ನಿಷ್ಠೆಯಿಂದಲಿ ಧರ್ಮ । ರಕ್ಷಿಸಲು ಅವತಾರ
ಆನಂದಾಶ್ರಮ ಸ್ವಾಮಿ । ಗುರುರೂಪ ನೀನೆ ॥೧॥
ಷಷ್ಟಾಬ್ಧಿ ವರುಷದಲಿ । ಶಾಂತ ಮೂರುತಿ ವರನ
ವೃಷ್ಟಿಸಲಿ ಹರಿಹರರು । ಗಂಗಾ ಜಲದ ತೀರ್ಥ
ದೃಷ್ಟಿಗೋಚರನಾಗಿ । ಜಗವೆಲ್ಲ ಹರಿ ನೀನೆ ॥೨॥

CC-O. In Public Domain. Digitized by eGangotri

ಸೃಷ್ಟಿಗೊಡೆಯನು ನೀನೆ । ಗುರು ಪಾಂಡುರಂಗಾ
ಶ್ರೇಷ್ಠ ನಿನ್ನಯ ನಾಮ । ಸ್ಮರಣೆಯು ಅನುದಿನದಿ
ಚಿತ್ತದಲಿವಿತ್ತು ರಕ್ಷಿಸೊ । ದೇವಾ ಕೃಷ್ಣಾ ॥೩॥

ರಾಗ : ಬಿಹಾಗ್ ॥ ಪದ ॥ ತಾಳ : ತ್ರಿತಾಳ

ಈಶನ ಕೃಪೆ ಇರಲಿ ಧರೆಯೊಳು । ಈಶನ ಕೃಪೆಯಿರಲಿ ॥ ಪ. ॥
ದಾಸ ಪುರಂದರ ವಿಠಲನ ನಾಮದ ।
ಘೋಷವು ಜಗದೊಳು ತುಂಬಿರಲಿ । ಅ.ಪ. ।

ಶೇಷಶಯನ ಹರಿವಿಠಲನ ಸ್ಮರಣೆಯು । ಶ್ವಾಸಶ್ವಾಸದಲಿ ತುಂಬಿರಲಿ ॥
ವಾಸವಾಗಿರು ಎನ್ನ ಹೃದಯಕಮಲದಲಿ ।
ದಾಸ ಪುರಂದರ ರೂಪದಲಿ ॥೧॥

ಭಾಸಕನೆ ರವಿಚಂದ್ರ ರೂಪದಲಿ । ಈಶಸರ್ವೇಶನು ರಕ್ಷಿಸಲಿ ॥
ದಾಸ ಪುರಂದರ ವಿಠಲನ ಮಹಿಮೆಯು ।
ಧರೆಯೊಳು ಅನುದಿನ ಪ್ರಕಾಶಿಸಲಿ ॥೨॥

ಸಂತ ಸಂಗದ ಸುಖ । ಶಾಂತಿದಾಯಕ ಶ್ರೀ ।
ಕಾಂತನ ಪ್ರೇಮದೊಳು ಮನವಿರಲಿ ॥
ಶಾಂತ ದಯಾನಿಧಿ ಆನಂದಾಶ್ರಮ ।
ಗುರು ಸ್ಮರಣೆಯಲಿ ಮನವಿರಲಿ ॥೩॥

ಭಕ್ತಿ ಪ್ರೇಮದ ಭಾವಕೆ ಒಲಿಯುವ । ಶಕ್ತಿದಾತನ ದಯೆಯಿರಲಿ ॥
ನಿತ್ಯಪೂರ್ಣ ಪರಬ್ರಹ್ಮ ಸ್ವರೂಪನ ।
ಪ್ರತ್ಯಗಾತ್ಮನ ದಯೆಯಿರಲಿ ॥೪॥

ಜನ್ಮಾಂತರದೊಳು ಪುಣ್ಯಫಗಳಿಸಿ ನಾ ।
ತನ್ಮಯನಾದೆನು ವಿಠಲನೊಳು ।
ಚಿನ್ಮಯ ಮೂರ್ತಿ ಶ್ರೀ ಪುರಂದರ ವಿಠಲನ ।
ದಾಸರ ನಾಮದೊಳು ಮನವಿರಲಿ ॥೫॥

ರಾಗ : ಬಹಾರ ॥ ಪದ ॥ ತಾಳ : ಕೇರವಾ

ಅಗಣಿತ ಗುಣಗಣ ಮಹಿಮನೆ ದೇವಾ ।
ಸಗುಣ ರೂಪನೀ ಪಾಂಡುರಂಗಾ ॥ ಪ. ॥
ಉಗವಂ ವಾದನದಿ ಗಂಗಾಜಲವು ।
ಪ್ರಕಟಿಸಿದವನೀ ಚರಣಾಂಗುಷ್ಠದಿ ॥
ನಿಗಮ ಗೋಚರನೆ ಖಗ ವಾಹನನೆ ।
ಭೃಗುಲಾಂಛನಧರ ರುಕ್ಮಿಣಿ ರಮಣಾ ॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri

ಉದರದೊಳಗೆ ಬ್ರಹ್ಮಾಂಡವ ಧರಿಸಿದ ।
ಪದುಮನಾಭನೆ ಲಕ್ಷ್ಮೀ ರಮಣಾ ।।
ಗದಗದ ಕಂಠದಿ ಪ್ರೇಮಾಶ್ರುಗಳಲಿ ।
ಪದವನು ತೊಳೆಯುವೆ ಮುದದಿಂದಲಿ ನಾ ।।೨।।

ನರಹರಿಯಾಗಿ ಪ್ರಹ್ಲಾದನ ಪೊರೆದವ ।
ಹರಿಹರ ಬ್ರಹ್ಮಾನಂದ ಸ್ವರೂಪನೆ ॥
ಪರಮ ಜ್ಯೋತಿ ರವಿಚಂದ್ರ ಪ್ರಕಾಶವು ।
ಧರೆಯೊಳು ಬೆಳಗಲಿ ಕಿರಣ ರೂಪದಲಿ ॥೩॥

ಸರಸಿಜಾಕ್ಷನೆ ಕರುಣಾ ನಿಧಿಯೇ ।
ಶರಣಾಗತ ರಕ್ಷ ನೀ ಹರಿಯೇ ॥
ಪರಮಹಂಸಗುರು ಆನಂದಾಶ್ರಮ ।
ಸ್ಮರಣೆಯೊಳಗೆ ಮನ ಅನುದಿನ ನಿಲಿಸೊ ॥೪॥

ರಾಗ : ಪೀಲು ॥ಪದ॥ ತಾಳ : ತ್ರಿತಾಳ

ಹೃದಯ ಮಂಟಪದಲಿ । ಪದುಮನಾಭನ ಮೂರ್ತಿ ॥
ಮುದದಿಂದಲಿ । ನಾ ಪೂಜಿಸುವೆ ॥ಪ.॥

ಕದಲದೆ ಎನ್ನಯ ಮನವು ನಿನ್ನಯ ದಿವ್ಯ ।
ಪದದೊಳಗಿರಿಸೊ ಶ್ರೀ ರಾಮಾ ನಿನ್ನ ॥ಅ.ಪ.॥

ಉದಯಿಸಿರುವ ಶ್ರೀ ಗಂಗಾಜಲವು ।
ಚರಣಾಂಗುಷ್ಠದ ಪದದೊಳಗೆ ॥ ॥೧॥

ಚದರಲಿ ನಿನ್ನಯ ಮಹಿಮೆಯು ಜಗದೊಳು ।
ಪದವನು ನಂಬಿದೆ ಶ್ರೀ ರಾಮಾ ನಿನ್ನ ॥೨॥

ನಿಧಿಯಾಗಿರುವ ಶ್ರೀ ಆನಂದಾಶ್ರಮ ।
ಗುರುಚರಣದಲೆನ್ನ ಮನ ನಿಲಿಸೋ ॥೩॥

ರಾಗ : ಪೀಲು ॥ಪದ॥ ತಾಳ : ಕೇರವಾ

ನಿನ್ನ ಹೊರತು ಅನ್ಯರಿಯೆನು । ಶ್ರೀ ಪಾಂಡುರಂಗಾ ।।ಪ.।।
ಬಿನ್ನಹಿಸಿಕೊಂಡಿಹೆನು । ಎನ್ನ ಅಪರಾಧಗಳನು ।
ಅನನ್ಯಭಾವಕೆನ್ನ ಒಲಿವ । ಚನ್ನ ಕೇಶವ ವಿಠಲರಾಯ ॥ಅ.ಪ.॥

ಭಿನ್ನನಾಗಿ ಜಗದೊಳಗೆ । ಜೀವರೂಪದಲ್ಲಿ ಮೆರೆವ ।
ಅಭಿನ್ನನಾದ ಪೂರ್ಣಬ್ರಹ್ಮ । ಶಾಂತಿ ಸುಖವ ಪೊರೆವ ದೇವ ।।೧।।

CC-O. In Public Domain. Digitized by eGangotri

ಪ್ರಸನ್ನನಾದ ಶಾಂತ ಮೂರ್ತಿ । ಶ್ರೀ ಆನಂದಾಶ್ರಮ ಗುರು ।।
ಚರಣ ಕಮಲದಲಿ ಮನಸು ಸ್ಥಿರ ನಿಲಿಸೊ ಪಾಂಡುರಂಗಾ ॥೨॥

ರಾಗ : ಕಾಮೋದ್ ॥ ಪದ ॥ ತಾಳ : ಧುಮಾಳಿ

ವಂದಿಸುವೆನು ಶ್ರೀಗುರುವರ ಚರಣಕೆ ।
ಕುಂದಿಲ್ಲದ ಆನಂದವು ದೊರಕಿತು ॥ ವಂದಿಸುವೆನು ॥ ಪ. ॥

ಹಿಂದಿನ ಜನ್ಮದ ಪಾಪಗಳಿಲ್ಲವು ।
ಬೆಂದು ಹೋದವು ಗುರುಕೃಪೆಯಿಂದಲಿ ।
ಇಂದುಶೇಖರನ ಕರುಣ ಕಟಾಕ್ಷವು ॥
ಇಂದೆದೊರಕಿತು ಪೂರ್ವಪುಣ್ಯದಿ ॥ ವಂದಿಸುವೆನು ॥೧॥

ಧರಣಿಯೊಳಗೆ ವರಶ್ರೀ ಚಿತ್ರಾಪುರ ।
ವರಪುರೇಶನ ಸ್ಮರಣೆಯ ಸ್ತುತಿಸುತ ।
ಗುರುಪರಮಾನಂದಾಶ್ರಮ ಸ್ವಾಮಿಯ ।
ಚರಣಕಮಲವನು ಅನುದಿನ ಸ್ಮರಿಸುತ ॥ ವಂದಿಸುವೆನು ॥೨॥

ಅಂತ್ಯವಿಲ್ಲದಾನಂತ ಬ್ರಹ್ಮಾಂಡದೊಳ್ ।
ಶಾಂತಿಗೊಳಿಸಲು ಸಂತಸದಿಂದಲಿ ।
ಶಾಂತಸದ್ಗುರು ಪಾಂಡುರಂಗಾಶ್ರಮ ।
ಶಾಂತಿಪದದೊಳು ಅನುದಿನನೆನೆಯುವ ॥ ವಂದಿಸುವೆನು ॥೩॥

ಘನವರ ರವಿಯ ಪ್ರಕಾಶದೊಳಗೆ ಗುರು ।
ಪರಿಜ್ಞಾನಾಶ್ರಮ ಪರಂಜ್ಯೋತಿಯೇ ॥
ವಿನುಗುತಿರಲಿ ಜಗದಂತರಂಗದಲಿ ।
ಅನುಪಮಗುಣ ಜಗದಾತ್ಮರೂಪನೆ ॥ ವಂದಿಸುವೆನು ॥೪॥

ರಾಗ : ದುರ್ಗಾ ॥ಪದ॥ ತಾಳ : ಝಂಪ

ದೀನ ಮನುಜನು ನಾನು । ದಾನ ಶೂರನು ನೀನು ।
ಧ್ಯಾನಿಸುವ ಭಕ್ತರ ಪೊರೆವಾತ ನೀನು ॥ಪ.॥

ಕಾನನದೊಳ್ ತಪಗೈದ ಧ್ರುವನ ಪೊರೆದವ ನೀನು ।
ಮಾನಿನೀ ದ್ರೌಪದಿಯ ಮಾನಕಾಯ್ದವ ನೀನು ।
ಸಾನುರಾಗದಿ ನಾನು ಧ್ಯಾನಮಾಡುವೆ ನಿನ್ನ ।
ಭಾನುತೇಜೋಭರಿತ ವೇಣುಗೋಪಾಲಕೃಷ್ಣ ॥೧॥

ಕಲ್ಲೊಳಗೆ ಧ್ಯಾನಿಸುವ ಅಹಲ್ಯೆ ಪೊರೆದವ ನೀನು ।
ಭಿಲ್ಲಿಣೀ ಭಕ್ತಿಗೇ ಒಲಿದಾತ ನೀನು ।
ವಲ್ಲೀಶಪುರದೊಳಗೆ ನೆಲೆಯಾಗಿ ನಿಂತಿರುವ ।
ಫುಲ್ಲಲೋಚನದೇವ ಗೊಲ್ಲ ಕೃಷ್ಣಾ ॥ ದೀನ ಮನುಜನು ॥೨॥

Sri Vidyabharathi Book Centre, Sringeri

CC-O. In Public Domain. Digitized by eGangotri

ಧರಣಿಪಾಲಕ ನೀನು। ಧರಣಿಪೊತ್ತವ ನೀನು।
ಹಿರಣ್ಯಾಕ್ಷಸುರನ ಮರ್ಧಿಸಿದಾತ ನೀನು।
ಗುರುಪರಮ ಶ್ರೀಮದಾನಂದಾಶ್ರಮ ಸ್ವಾಮಿ।
ಚರಣಸೇವಕನೆಂದೆನೆಸು ದೇವಾ ॥೩॥

ಅಂಡಜಾತಿಗಳಲ್ಲಿ। ಅಂಡರೂಪವ ಧರಿಸಿ।
ಪಿಂಡಬ್ರಹ್ಮಾಂಡದೊಳು ಭರಿತನಾಗಿ ॥
ಪಾಂಡುರಂಗಾಶ್ರಮ ಯತಿಯೊಳು ನೆಲೆಸಿರುವ।
ಪುಂಡಲೀಕನ ಪೊರೆವ ಪಾಂಡುರಂಗಾ ॥೪॥

ರಾಗ : ಸೊಹನಾ ॥ ಪದ ॥ ತಾ : ಶ್ರಿತಾಳ

ವಂದಿಸುವೆನು ಶ್ರೀ ಪರಮಹಂಸಗುರು।
ಚಂದ್ರಶೇಖರ ಭಾರತಿಯನು ನಾ ॥ ವಂದಿಸುವೆನು ॥ ಪ. ॥

ಧರೆಯೊಳು ಶ್ರೀ ಶೃಂಗೇರಿ ಪುರದಲಿ।
ಶ್ರೀ ನರಸಿಂಹ ಭಾರತಿ ವರಗುರು ॥
ಚರಣಕಮಲದಲಿ ಅನುದಿನ ಸ್ತುತಿಸುವ।
ಚಂದ್ರಶೇಖರ ಭಾರತಿಯನು ನಾ।। ವಂದಿಸುವೆನು ॥೧॥

ವೇದಮಂತ್ರಗಳ ನಿಧಿಯಾಗಿರುವ ಶ್ರೀ।
ವೇದಮಾತೆಯ ಶ್ರೀ ಶಾರದೆಯ ॥
ಪಾದಕಮಲವನು ಸದಾ ಸ್ಮರಿಸುವ।
ಚಂದ್ರಶೇಖರ ಭಾರತಿಯನು ನಾ ॥ ವಂದಿಸುವೆನು ॥೨॥

ಭರಿತವಾದ ನದಿ ತುಂಗಾ ತೀರದಿ।
ವರ ಗುರು ಆದಿ ಶ್ರೀ ಶಂಕರನ ॥
ಗಂಗೋದಕ ಅಭಿಷೇಕವ ಮಾಡುವ।
ಚಂದ್ರಶೇಖರ ಭಾರತಿಯನು ನಾ ॥ ವಂದಿಸುವೆನು ॥೩॥

ನಿತ್ಯ ಪ್ರಕಾಶಕ ಸ್ವಯಂ ಜ್ಯೋತಿ ನೀ।
ಪ್ರತ್ಯಗಾತ್ಮನು ನೀನಾಗಿಹೆ ಗುರು ॥
ಸತ್ ಚಿತ್ ಆನಂದಾಮೃತರೂಪನೆ।
ಚಂದ್ರಶೇಖರ ಭಾರತಿಯನು ನಾ ॥ ವಂದಿಸುವೆನು ॥೪॥

ಶುದ್ಧಪೂರ್ಣ ಪರಬ್ರಹ್ಮ ಸ್ವರೂಪನೆ।
ಉದ್ಧರಿಸಲಿ ಶ್ರೀ ಆದಿ ಶಂಕರನೆ ॥
ಅಭಿನವ ವಿದ್ಯಾ ತೀರ್ಥರೂಪದಲಿ।
ಚಂದ್ರಶೇಖರ ಭಾರತಿಯನು ನಾ ।। ವಂದಿಸುವೆನು ॥೫॥

CC-O. In Public Domain. Digitized by eGangotri

ಮಂಗಲಮಯ ಪ್ರಣವಾತ್ಮ ಸ್ವರೂಪಿಣಿ ।
ಶೃಂಗೇರೀ ಪುರವಾಸಿನಿ ಶಾರದೆ ।।
ಸೌಮಂಗಲ್ಯದ ಸುಖವರದಾಯಿನಿ ।
ಮಂಗಲವಾಗಲಿ ಶೃಂಗಗಿರಿಯಲಿ ।। ವಂದಿಸುವೆನು ।।೬।।

ರಾಗ : ಮಾಂಡ್ ।।ಪದ।। ತಾಳ : ತ್ರಿತಾಳ

ಗುರುಮಹಿಮೆಯು ಈ ಜಗದಾಕಾರ ।
ದುರಿತವಿನಾಶಕ ಪ್ರಣವ ಸ್ವರೂಪ ।। ಗುರುಮಹಿಮೆ ।।ಪ.।।

ಚಿಂತೆ ಎಂಬ ಈ ಮನದ ವಿಕಾರವು ।
ಭ್ರಾಂತಿಗೊಳಿಸುತ ಚಲಿಸುವ ಜಗದೊಳು ।
ಶಾಂತಸಜ್ಜನರ ಬೋಧಕಥಾಮೃತ ।
ಶಾಂತಿಗೊಳಿಸಲಿ ಎನ್ನಯ ಜೀವಕೆ ।। ಗುರುಮಹಿಮೆ ।।೧।।

ಧರೆಯೊಳು ಶ್ರೀ ಮಲ್ಲೇಶ್ವರ ಪುರದೊಳು ।
ಮೆರೆಯುತಿರುವ ಶ್ರೀ ಗುರುಪಾಂಡುರಂಗನ ।
ಚರಣಾಮೃತದನೆ ಎರೆದು ಎನ್ನಯ ಮೋಹ ।
ಪರಿಹರಿಸೋ ಭವತಾರಕ ಗುರುವೆ ।। ಗುರುಮಹಿಮೆ ।।೨।।

ರಾಗ : ಸಾರಂಗ ।। ಪದ ।। ತಾಳ : ಝಂಪ

ಪೃಥ್ವಿಯಲಿ ತುಂಬಿರುವ, ಆತ್ಮಜ್ಯೋತಿಯು ನೀನೆ ।।
ಅತಿ ಮನೋಹರನಾದ ಕೃಷ್ಣ ನೀನೆ ।। ಪ. ।।

ರತ್ನಮಂಟಪದೊಳಗೆ, ಉತ್ತಮೋತ್ತಮ ನಿನ್ನ ।
ನಿತ್ಯನೇಮದಿ ನಿನ್ನ ಪೂಜಿಸುವೆ ಕೃಷ್ಣಾ ।।೧।।
ಚಿತ್ತದಲಿ ಹೊಳೆಯುವ, ಕೃಷ್ಣಮೂರ್ತಿಯು ನೀನೆ ।
ಭಕ್ತಿಭಾವಕೆ ಒಲಿವ ಭಕ್ತರಕ್ಷಕ ಕೃಷ್ಣಾ ।।೨।।

ಸಚ್ಚಿದಾನಂದ ಪರಬ್ರಹ್ಮ ರೂಪನು ನೀನೆ ।
ಪ್ರತ್ಯಗಾತ್ಮನು ನೀನೆ ಜಗದೊಡೆಯ ಕೃಷ್ಣಾ ।।೩।।
ಅತಿ ಪ್ರೇಮದಲಿ ನೀನೆ, ಹೃದಯಕಮಲದಲೆನ್ನ ।
ಸ್ಥಿತನಾಗಿ ಆನುದಿನದಿ ನಿಲ್ಲೊ ಕೃಷ್ಣಾ ।।೪।।

ಪ್ರೇಮಭಾವದಿ ನಮ್ಮ, ವಾಮನಾಶ್ರಮ ಸ್ವಾಮಿ ।
ನಾಮ ರೂಪದಿ ಜಗವ ರಕ್ಷಿಸೈ ಕೃಷ್ಣಾ ।।೫।।

ಸ್ಮೃತಿ ರೂಪದಲಿ ನಿನ್ನ, ನಾಮಸ್ಮರಣೆಯು ಎನಗೆ ।
ಸತತವಾಗಿರುವಂತೆ ಮಾಡೊ ಕೃಷ್ಣಾ ।।೬।।

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಗ : ಕಲ್ಯಾಣ ॥ ಪದ ॥ ತಾಳ : ಝಂಪ

ಬಲ್ಲವನೆ ನೀನಯ್ಯ ಪುಲ್ಲಲೋಚನ ಕೃಷ್ಣ
ನಿಲ್ಲುನೀ ಚಿತ್ತದೊಳು ಪರಮ ಶಾಂತಿಯ ಮೂರ್ತಿ ॥ ಪ. ॥

ಎಲ್ಲರೊಳು ಪ್ರೇರಕನು ನೀನಲ್ಲವೆ ದೇವ ।
ಪ್ರಹ್ಲಾದ ಭಕ್ತನಿಗೆ ಪಿತನವನು ಕೇಳುತಿರೆ ।
ಎಲ್ಲಿಹನು ಹರಿಯವನು ಜಗದೊಡೆಯ ಕೃಷ್ಣಾ ॥೧॥

ಅಲ್ಲಿಯೇ ಖಂಬದೊಳು ಪ್ರಕಟನಾದನು ಹರಿಯು ।
ಎಲ್ಲರೊಳು ಹರಿರೂಪ ಜಗದೊಳಗೆ ತುಂಬಿಹನು ।
ಮಲ್ಲೇಶಪುರವಾಸ ವಿಜಯ ವಿಠ್ಠಲ ಕೃಷ್ಣ ॥೨॥

ರಾಗ : ಹಮೀರ್ ॥ಪದ॥ ತಾಳ : ಧುಮಾಳಿ

ದಯೆ ಪಾಲಿಸೈ ಶ್ರೀ ಶಾರದಾಂಬಾ । ದಯೆಪಾಲಿಸೈ ಶ್ರೀ ಶಾರದಾಂಬಾ ॥

ಇಂದ್ರಾದಿ ದೇವ ಸುರವಂದಿತೆ । ಚಂದ್ರಶೇಖರ ಗುರುಪೂಜಿತೆ
ದಯೆಪಾಲಿಸೈ ॥

ಪಾಪಂಗಳೆಲ್ಲ ತೊರೆಸಿ ಎನ್ನಯ । ಗೋಪಾಲಕೃಷ್ಣವಿನುತಚರಣೆ
ದಯೆಪಾಲಿಸೈ ॥

ಶೃಂಗಾರವಾದ ಶೃಂಗೇರಿಯಲ್ಲಿ । ಮಾಂಗಲ್ಯನೀವ ಸಂಗೀತಲೋಲೆ
ದಯೆಪಾಲಿಸೈ ॥

ರಾಗ : ಬಾಗೇಶ್ರೀ ॥ಪದ॥ ತಾಳ : ತ್ರಿತಾಳ

ನಿತ್ಯ ನಿನ್ನಯ ದಿವ್ಯ ನಾಮಸ್ಮರಣೆ ಎನ್ನ ।
ಚಿತ್ತದೊಳಿರಿಸೋ ಪಾರ್ವತಿ ಪ್ರಿಯನೆ । ನಿತ್ಯ ನಿನ್ನಯ ದಿವ್ಯ ॥

ಅತಿ ರುದ್ರದಿ ನಿನ್ನ ಮಂತ್ರವ ಜಪಿಸಲು ।
ಶತ ಜನ್ಮದ ಬಹುಪಾಪವ ಹರನೆ ॥ ನಿತ್ಯ ನಿನ್ನಯ ದಿವ್ಯ ॥೧॥

ಮಿತವಿಲ್ಲದ ಸುಖಶಾಂತಿ ಸ್ವರೂಪನೆ ।
ಸ್ಥಿತನಾಗಿರು ಎನ್ನ ಹೃದಯಕಮಲದಲಿ ॥ ನಿತ್ಯ ನಿನ್ನಯ ದಿವ್ಯ ॥೨॥

ಧರೆಯೊಳು ಶ್ರೀ ಚಿತ್ರಾಪುರಧೀಶನೆ ।
ವರವನು ಪಾಲಿಸು ಶಾಂತಿ ರೂಪದಲಿ ॥ ನಿತ್ಯ ನಿನ್ನಯ ದಿವ್ಯ ॥೩॥

ಪರಮ ದಯಾಮಯ ಆನಂದಾಶ್ರಮ ।
ಗುರುಚರಣದಲಿನ್ನ ಮನನಿಲಿಸೊ ॥ ನಿತ್ಯ ನಿನ್ನಯ ದಿವ್ಯ ॥೪॥

ರಾಗ : ಬಹಾರ ॥ ಕಂದ ॥

ಕಲ್ಲಿನೊಳು ಧ್ಯಾನಿಸುವ ಅಹಲ್ಯೆ ಪೊರೆದಾತನು ।
ಪುಲ್ಲನೆ ಬರುತಿರಲು ಎಲ್ಲ ಹೂವುಗಳು ತ್ರಾಂ ।
ಚೆಲ್ಲಿ ಸುವಾಸವನು ಬೀರುತಿರಲು ।
ಎಲ್ಲರನು ಜಗದೊಳಗೆ ಪೊರೆವಾತ ದೇವನೆ ।
ನಿಲ್ಲುನೀ ಎದುರಿನಲಿ ರಾಮಚಂದ್ರ ॥೧॥

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri